# ಮಂಗಳೂರು ವಿಶ್ವವಿದ್ಯಾನಿಲಯ

**ದಿನಾಂಕ 24.02.2020 ರಂದು ಪೂರ್ವಾಹ್ನ ಗಂಟೆ 11:00ಕ್ಕೆ ಸರಿಯಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತ ಸೌಧದ ಸಿಂಡಿಕೇಟ್ ಸಭಾಂಗಣದಲ್ಲಿ ನಡೆದ ಸಿಂಡಿಕೇಟಿನ 2020ನೇ ಸಾಲಿನ ಪ್ರಥಮ ಸಾಮಾನ್ಯ ಸಭೆಯ ನಡಾವಳಿಗಳು.**

**ಉಪಸ್ಥಿತ ಸದಸ್ಯರು:**

1. ಪ್ರೊ. ಪಿ. ಸುಬ್ರಹ್ಮಣ್ಯ ಯಡಪಡಿತ್ತಾಯ — ಅಧ್ಯಕ್ಷರು
   ಕುಲಪತಿಗಳು
   ಮಂಗಳೂರು ವಿಶ್ವವಿದ್ಯಾನಿಲಯ
   ಮಂಗಳಗಂಗೋತ್ರಿ – 574 199

2. ಡಾ. ಅಪ್ಪಾಜಿ ಗೌಡ ಎಸ್. ಬಿ. — ಸದಸ್ಯರು
   ಜಂಟಿ ನಿರ್ದೇಶಕರು
   ಕಾಲೇಜು ಶಿಕ್ಷಣ ಇಲಾಖೆ
   ಪ್ರಾದೇಶಿಕ ಕಚೇರಿ, ಮಂಗಳೂರು – 575 001
3. ಪ್ರೊ. ಡಿ. ಶಿವಲಿಂಗಯ್ಯ — – ” –
   ಡೀನರು, ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ ಹಾಗೂ
   ಪ್ರಾಧ್ಯಾಪಕರು, ಸ್ನಾತಕೋತ್ತರ ಗ್ರಂಥಾಲಯ ಮತ್ತು
   ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ
   ಮಂಗಳಗಂಗೋತ್ರಿ – 574 199
4. ಶ್ರೀ ಜಯಪ್ರಕಾಶ್ ಆರ್. — – ” –
   ಪ್ರಾಕ್ಟೀಸಿಂಗ್ ಅಡ್ವೋಕೇಟ್, ನಂ. 26,
   ಒಂದನೇ ಮಹಡಿ, ಒಂದನೇ ಮುಖ್ಯ ರಸ್ತೆ,
   ವ್ಯಾಲಿಕಾವಲ್, ಬೆಂಗಳೂರು– 560 003

5. ಶ್ರೀ ಅಶೋಕ್ ಕುಮಾರ್ ರೈ — – ” –
   “ಅನುರಾಗ್”, ಡಿ.ನಂ.2–30–2484/1,
   ಕಾಸ್ಮಸ್ ಲೇನ್, ಕದ್ರಿ ಕಂಬ್ಳ, ಮಂಗಳೂರು

6. ಪ್ರೊ. ಅಖಿಲೇಶ್ ಪಿ. ಎಂ. — – ” –
   ಪ್ರಾಂಶುಪಾಲರು
   ಫಾದರ್ ಮುಲ್ಲರ್ ಕಾಲೇಜು
   ಮಂಗಳೂರು – 575002
7. ಡಾ. ಮನೋಹರ್ ವಿನ್ಸೆಂಟ್ ಸೆರಾವೊ — – ” –
   ಪ್ರಾಂಶುಪಾಲರು,
   ಸಂತ ಅಲೋಶಿಯಸ್ ಸಂಧ್ಯಾ ಕಾಲೇಜು
   ಮಂಗಳೂರು – 575 003
8. ಪ್ರೊ. ಶ್ರೀವರ್ಮ ಅಜ್ರಿ ಎಂ. — – ” –
   ಪ್ರಾಂಶುಪಾಲರು
   ಮಂಜುನಾಥ ಪೈ ಮೆಮೋರಿಯಲ್ ಸರಕಾರಿ ಪ್ರಥಮ ದರ್ಜೆ ಕಾಲೇಜು
   ಕಾರ್ಕಳ –– 574 104
9. ಶ್ರೀಮತಿ ಕಸ್ತೂರಿ ಜೆ. ಶೆಟ್ಟಿ — – ” –
   ಪ್ರಾಂಶುಪಾಲರು
   ಶ್ರೀದೇವಿ ಕಾಲೇಜ್ ಆಫ್ ಫ್ಯಾಶನ್ ಡಿಸೈನ್
   ಬಲ್ಲಾಳ್‌ಬಾಗ್, ಮಂಗಳೂರು –– 575 003

10. ಡಾ. ಎಂ. ಎಸ್. ತಳವಾರ –"–
ನಂ. 777 "ಜೇನುಗೂಡು", ಬನಶಂಕರಿ,
6ನೇ ಹಂತ, 5ನೇ ಬ್ಲಾಕ್,
ಮೆಟ್ಟಕಲ್ಲಪಾಳ್ಯ, ಬೆಂಗಳೂರು–560 025

11. ಶ್ರಿ. ಕೆ. ರಮೇಶ – " –
ನಂ. 1004, ಮಹಾಬಲೇಶ್ವರ ಕ್ಲಾಸಿಕ್ ರೂಬಿ,
ವಾಟರ್ ಟ್ಯಾಂಕ್ ಎದುರುಗಡೆ,
ಶ್ರೀ ಗೋಪಾಲಕೃಷ್ಣ ದೇವಸ್ಥಾನದ ಹತ್ತಿರ
ಶಕ್ತಿನಗರ, ಮಂಗಳೂರು–575 016

.........2



12. ಡಾ. ಪಾರ್ವತಿ ಅಪ್ಪಯ್ಯ – " –
"ಹಿಮವನ" ಮುಳಿಯ ಬಡಾವಣೆ
ಎಫ್.ಎಂ.ಕೆ.ಎಂ.ಸಿ. ಕಾಲೇಜು ಹಿಂಭಾಗ,
ಅಂಚೆ ಮಡಿಕೇರಿ, ಕೊಡಗು – 571 201

13. ಶ್ರೀ ಮೋಹನ್ ಪಡಿವಾಳ್ – " –
"ಸಮ್ಮೇಧ", ಎಂ. ಎಸ್. ನಗರ, 11ನೇ ಅಡ್ಡ ರಸ್ತೆ,
ತೆಲ್ಲಾರ್ ರಸ್ತೆ, ಕಾರ್ಕಳ, ಉಡುಪಿ – 574 104

14. ಶ್ರೀ ವಿವೇಕಾನಂದ ಪನಿಯಾಳ – " –
ಪನಿಯಾಳ ಹೌಸ್, ಕೊಡಿಯಾಳ ಗುತ್ತು
ಕೊಡಿಯಾಲ್‌ಬೈಲ್ ಪೂರ್ವ ಮುಖ್ಯ ರಸ್ತೆ,
ಮಂಗಳೂರು– 575004

15. ಶ್ರೀ ರವೀಂದ್ರನಾಥ ರೈ – " –
ಬಿನ್ ದಿ. ಕ್ಯಾಪ್ಟನ್ ಬಾಲಕೃಷ್ಣ ರೈ ಬಿ. ಎಸ್.
"ಲಕ್ಷ್ಮೀನಿವಾಸ" 3ನೇ ಅಡ್ಡ ರಸ್ತೆ
ಕೊಡಿಯಾಳಗುತ್ತು ಪೂರ್ವ,
ಕೊಡಿಯಾಲ್‌ಬೈಲ್ ಅಂಚೆ, ಮಂಗಳೂರು –575003

16. ಶ್ರೀಮತಿ ಟಿ. ಎಲ್. ಶಾರದಮ್ಮ – " –
ಪ್ರಾಂಶುಪಾಲರು, ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ
ಮಂಗಳೂರು – 575 001,

17. ಪ್ರೊ. ರವೀಂದ್ರಾಚಾರಿ. ವಿ. – " –
ಕುಲಸಚಿವರು (ಪರೀಕ್ಷಾಂಗ)
ಮಂಗಳೂರು ವಿಶ್ವವಿದ್ಯಾನಿಲಯ
ಮಂಗಳಗಂಗೋತ್ರಿ – 574 199

18. ಪ್ರೊ. ಎ. ಎಂ. ಖಾನ್ ಸದಸ್ಯ ಕಾರ್ಯದರ್ಶಿ
ಕುಲಸಚಿವರು
ಮಂಗಳೂರು ವಿಶ್ವವಿದ್ಯಾನಿಲಯ
ಮಂಗಳಗಂಗೋತ್ರಿ – 574 199

**ವಿಶೇಷ ಆಹ್ವಾನಿತರು:**

19. ಪ್ರೊ. ಶ್ರೀಪತಿ ಕಲ್ಲೂರಾಯ
    ಹಣಕಾಸಿನ ಅಧಿಕಾರಿ, ಮಂಗಳೂರು ವಿಶ್ವವಿದ್ಯಾನಿಲಯ
    ಮಂಗಳಗಂಗೋತ್ರಿ – 574199

**ಅನುಪಸ್ಥಿತ ಸದಸ್ಯರು:**

20. ತಾಂತ್ರಿಕ ಶಿಕ್ಷಣ ನಿರ್ದೇಶಕರು — ಸದಸ್ಯರು
    ಕರ್ನಾಟಕ ರಾಜ್ಯ,ಅರಮನೆ ರಸ್ತೆ, ಬೆಂಗಳೂರು – 560 001.

21. ವೈದ್ಯಕೀಯ ಶಿಕ್ಷಣ ನಿರ್ದೇಶಕರು — – ” –
    ಕರ್ನಾಟಕ ರಾಜ್ಯ, ಆನಂದ ರಾವ್ ವೃತ್ತ
    ಬೆಂಗಳೂರು – 560 009

22. ನಿರ್ದೇಶಕರು — – ” –
    ಪದವಿ ಪೂರ್ವ ಶಿಕ್ಷಣ ಇಲಾಖೆ
    ಪದವಿ ಪೂರ್ವ ಶಿಕ್ಷಣ ಭವನ
    18 ನೇ ಅಡ್ಡ ರಸ್ತೆ. ಸಂಪಿಗೆ ರಸ್ತೆ ಮಲ್ಲೇಶ್ವರಂ
    ಬೆಂಗಳೂರು - 560 012.

******

# <u>ಮಂಗಳೂರು ವಿಶ್ವವಿದ್ಯಾನಿಲಯ</u>

**ದಿನಾಂಕ 24.02.2020 ರಂದು ಪೂರ್ವಾಹ್ನ ಗಂಟೆ 11:00ಕ್ಕೆ ಸರಿಯಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತ ಸೌಧದ ಸಿಂಡಿಕೇಟ್ ಸಭಾಂಗಣದಲ್ಲಿ ನಡೆದ ಸಿಂಡಿಕೇಟಿನ 2020ನೇ ಸಾಲಿನ ಪ್ರಥಮ ಸಾಮಾನ್ಯ ಸಭೆಯ ನಡಾವಳಿಗಳು.**

**ಉಪಸ್ಥಿತ ಸದಸ್ಯರು:**

**ಅನುಪಸ್ಥಿತ ಸದಸ್ಯರು:**

## <u>ಪ್ರಾರಂಭಿಕ</u>

ಪ್ರಾರಂಭದಲ್ಲಿ ಮಾನ್ಯ ಕುಲಪತಿಯವರು ಎಲ್ಲಾ ಸದಸ್ಯರನ್ನು ಸಭೆಗೆ ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಿದರು.

**I ನಡಾವಳಿಗಳ ದೃಢೀಕರಣ:**

1. ದಿನಾಂಕ 30.12.2019ರಂದು ನಡೆದ 2019ನೇ ಸಾಲಿನ ಎಂಟನೆಯ ಸಾಮಾನ್ಯ ಸಭೆಯ ನಡಾವಳಿಗಳನ್ನು **ಈ ಕೆಳಗಿನ ತಿದ್ದುಪಡಿಯೊಂದಿಗೆ** ದೃಢೀಕರಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಆಡಳಿತ:ಸಾ.ಸ.8:04(2019)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯ ಪ್ರಥಮ ದರ್ಜೆ ಕಾಲೇಜು, ಮಂಗಳಗಂಗೋತ್ರಿ ಇಲ್ಲಿಗೆ ಅಗತ್ಯವಿರುವ ವಿದ್ಯಾರ್ಥಿ ಮೇಜು ಮತ್ತು ಕುರ್ಚಿಗಳನ್ನು ಖರೀದಿಸುವ ಬಗ್ಗೆ

**ನಿರ್ಣಯ:** ದಿನಾಂಕ 24.12.2019ರಂದು ನಡೆದ ಖರೀದಿ ಸಮಿತಿಯ ಶಿಫಾರಸ್ಸಿನಂತೆ ಮಂಗಳೂರು ವಿಶ್ವವಿದ್ಯಾನಿಲಯ ಪ್ರಥಮ ದರ್ಜೆ ಕಾಲೇಜು, ಮಂಗಳಗಂಗೋತ್ರಿ ಇಲ್ಲಿಗೆ ಅಗತ್ಯವಿರುವ ವಿದ್ಯಾರ್ಥಿ ಮೇಜು ಮತ್ತು ಕುರ್ಚಿಗಳನ್ನು ಖರೀದಿಸುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ತಿದ್ದುಪಡಿ ನಿರ್ಣಯ** ಸಿಂಡಿಕೇಟ್ ಸದಸ್ಯರಾದ ಶ್ರೀ ರಮೇಶ ಕೆ. ಇವರು ಸಾರ್ವಜನಿಕ ವಲಯಗಳಿಂದ ಟೆಂಡರಿನ ಬಗ್ಗೆ ಆಕ್ಷೇಪಣೆಗಳು ವ್ಯಕ್ತವಾಗಿರುವುದು ಅಲ್ಲದೆ ಮಂಗಳೂರು ವಿಶ್ವವಿದ್ಯಾನಿಲಯ ಪ್ರಥಮ ದರ್ಜೆ ಕಾಲೇಜಿಗೆ ಸರ್ಕಾರದಿಂದ ನೋಂದಣಿ/ಮಾನ್ಯತೆ ಸಿಗದಿರುವುದರಿಂದ ಸದರಿ ನಿರ್ಣಯಕ್ಕೆ ಆಕ್ಷೇಪಣೆ ಸಲ್ಲಿಸಿರುತ್ತಾರೆ. ಸದರಿಯವರ ಆಕ್ಷೇಪಣೆ ಬಗ್ಗೆ ಚರ್ಚಿಸಲಾಗಿ ವಿಶ್ವವಿದ್ಯಾನಿಲಯದ ಪ್ರಥಮ ದರ್ಜೆ ಕಾಲೇಜು, ಮಂಗಳಗಂಗೋತ್ರಿ ಇಲ್ಲಿಗೆ ಅಗತ್ಯವಿರುವ ವಿದ್ಯಾರ್ಥಿ ಮೇಜು ಮತ್ತು ಕುರ್ಚಿಗಳನ್ನು ಖರೀದಿಸುವ ಪ್ರಸ್ತಾವನೆಯನ್ನು ಮುಂದೂಡಲು ನಿರ್ಣಯಿಸಲಾಯಿತು.

**II ಅನುಸರಣಾ ವರದಿಯ ಅನುಮೋದನೆ:**

1. ದಿನಾಂಕ 09.12.2020 ರಂದು ನಡೆದ ಸಿಂಡಿಕೇಟಿನ 2019ನೇ ಸಾಲಿನ ಏಳನೆಯ ಸಾಮಾನ್ಯ ಸಭೆಯ ನಿರ್ಣಯಗಳ ಮೇಲೆ ತೆಗೆದುಕೊಂಡ ಕ್ರಮಗಳ ಕೆಲವು ಅನುಸರಣಾ ವರದಿಗಳಲ್ಲಿ ಪತ್ರ ಬರೆಯಲಾಗಿದೆ, ಪ್ರಸ್ತಾವನೆ ಸಲ್ಲಿಸಲಾಗಿದೆ, ಟೆಂಡರ್ ಕರೆಯಲಾಗಿದೆ, ಸರ್ಕಾರಕ್ಕೆ ಕಳುಹಿಸಲಾಗಿದೆ ಎಂದು ನಮೂದಿಸಿಲಾಗಿರುತ್ತದೆ. ಅನುಸರಣಾ ವರದಿಗಳಲ್ಲಿ ಸರ್ಕಾರಕ್ಕೆ ಬರೆದ ಪತ್ರಗಳ ಸಂಖ್ಯೆ ಮತ್ತು ದಿನಾಂಕ, ಟೆಂಡರ್ ಸಂಖ್ಯೆ ಮತ್ತು ಪ್ರಕಟಿಸಿದ ದಿನಾಂಕಗಳ ವಿವರಗಳನ್ನು ಸ್ಪಷ್ಟವಾಗಿ ನಮೂದಿಸುವ ಬಗ್ಗೆ ಸಂಬಂಧಪಟ್ಟ ಕಚೇರಿಗಳಲ್ಲಿ ಸೂಕ್ತ ಕ್ರಮ ಕೈಗೊಳ್ಳಲು ಹಾಗೂ ಮುಂದೆ ಅನುಸರಣಾ ವರದಿಗಳನ್ನು ತಯಾರಿಸುವಾಗ ಈ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ತಯಾರಿಸುವ ಬಗ್ಗೆ ಕ್ರಮ ಕೈಗೊಳ್ಳಲು ನಿರ್ಣಯಿಸಲಾಯಿತು.
2. ಕ್ರಮ ಸಂಖ್ಯೆ: 30, ಕಾರ್ಯಸೂಚಿ ಸಂಖ್ಯೆ ಸಿಬ್ಬಂದಿ:ಸಾ.ಸ.7:30(2019)ರ ನಿರ್ಣಯವನ್ನು ಈ ಕೆಳಗಿನಂತೆ ತಿದ್ದುಪಡಿ ಮಾಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ:ಸಾ.ಸ.7:30(2019)

**ವಿಷಯ:** ಘಟಕ ಕಾಲೇಜಿನ ಬೋಧಕ ಸಿಬ್ಬಂದಿಗಳ ವರ್ಗಾವಣೆ ಬಗ್ಗೆ.

**ನಿರ್ಣಯ:** ಡಾ. ಬಿ. ಸೀತರಾಮ ಕಡಮಣ್ಣಾಯ, ಸಹ ಪ್ರಾಧ್ಯಾಪಕರು, ಪ್ರಾಣಿಶಾಸ್ತ್ರ ವಿಭಾಗ, ಫೀಲ್ಡ್ ಮಾರ್ಷಲ್ ಕೆ. ಎಂ. ಕಾರ್ಯಪ್ಪ ಕಾಲೇಜು, ಮಡಿಕೇರಿ ಇವರನ್ನು NAAC ಸಮಿತಿಯ ಭೇಟಿಯ ನಂತರ ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಇಲ್ಲಿಗೆ ನಿಯೋಜನೆ ಮಾಡಲು ನಿರ್ಣಯಿಸಲಾಯಿತು.

**ತಿದ್ದುಪಡಿ ನಿರ್ಣಯ** ಡಾ. ಬಿ. ಸೀತರಾಮ ಕಡಮಣ್ಣಾಯ, ಸಹ ಪ್ರಾಧ್ಯಾಪಕರು, ಪ್ರಾಣಿಶಾಸ್ತ್ರ ವಿಭಾಗ, ಫೀಲ್ಡ್ ಮಾರ್ಷಲ್ ಕೆ. ಎಂ. ಕಾರ್ಯಪ್ಪ ಕಾಲೇಜು, ಮಡಿಕೇರಿ ಇವರನ್ನು NAAC ಸಮಿತಿಯ ಭೇಟಿಯ ನಂತರ ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಇಲ್ಲಿಗೆ **ವರ್ಗಾವಣೆ** ಮಾಡಲು ನಿರ್ಣಯಿಸಲಾಯಿತು.

ಉಳಿದಂತೆ ಅನುಸರಣಾ ವರದಿಯನ್ನು ಅನುಮೋದಿಸಲಾಯಿತು.

III ಈ ಸಿಂಡಿಕೇಟು ಸಭೆಗೆ ಮಂಡಿಸಿರುವ ಕಾರ್ಯಸೂಚಿಗಳು:

**ಕಾರ್ಯಸೂಚಿ ಸಂಖ್ಯೆ:** ಆಡಳಿತ:ಸಾ.ಸ.1:01(2020)

**ವಿಷಯ:** ವಿಶ್ವವಿದ್ಯಾನಿಲಯದ ಗ್ರಂಥಾಲಯದ EZ Proxy software for Remote Access Facility ಯನ್ನು ನವೀಕರಿಸುವ ಕುರಿತು

**ನಿರ್ಣಯ:** ವಿಶ್ವವಿದ್ಯಾನಿಲಯದ ಗ್ರಂಥಾಲಯಕ್ಕೆ EZ Proxy software for Remote Access Facility ಯನ್ನು ಏಕೈಕ ಪೂರೈಕೆದಾರರಾದ M/s Informatics Publishing Ltd., Bangalore ಇವರಿಂದ ರೂ.1,41,600/–ರ ವೆಚ್ಚದಲ್ಲಿ ಗಣಕಯಂತ್ರ ಕೇಂದ್ರದ ನಿರ್ದೇಶಕರು ತಿಳಿಸಿರುವ ಷರತ್ತುಗಳನ್ನು ಪೂರೈಸುವ ಮೇರೆಗೆ ನವೀಕರಣಗೊಳಿಸುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಆಡಳಿತ: ಸಾ.ಸ.1:02(2020)

**ವಿಷಯ:** ಕಂಪ್ಯೂಟರ್ ಪ್ರಿಂಟರ್ ಟೋನರ್ ರೀಫಿಲ್ಲಿಂಗ್ ಹಾಗೂ ಡ್ರಮ್ ಬದಲಾವಣೆ ಬಗ್ಗೆ ಧಾರಾಣಾ ಗುತ್ತಿಗೆ ದರ ನಿಗದಿಪಡಿಸುವ ಬಗ್ಗೆ

**ನಿರ್ಣಯ:** ದಿನಾಂಕ 17.01.2020ರಂದು ನಡೆದ ಖರೀದಿ ಸಮಿತಿಯ ಶಿಫಾರಸ್ಸಿನಂತೆ M/s Zoom Computech, Mangalore ಸಂಸ್ಥೆಯ ಕಂಪ್ಯೂಟರ್ ಪ್ರಿಂಟರ್ ಟೋನರ್ ರೀಫಿಲ್ಲಿಂಗ್ ಒಂದರ ದರ ತೆರಿಗೆ ಸೇರಿ ರೂ.354/– ಮತ್ತು ಟೋನರ್ ಡ್ರಮ್ ಒಂದರ ದರ ತೆರಿಗೆ ಸೇರಿ ರೂ.236/–ರಂತೆ ಒಂದು ವರ್ಷದ ಅವಧಿಗೆ ಧಾರಣಾ ಗುತ್ತಿಗೆ ನೀಡುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಆಡಳಿತ:ಸಾ.ಸ.1:03(2020)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ವಿವಿಧ ಕಛೇರಿ/ವಿಭಾಗಗಳಿಗೆ ಪ್ರಿಂಟೆಡ್ ಐಟಂ ಲೇಖನ ಸಾಮಾಗ್ರಿ ಖರೀದಿ ಕುರಿತು

**ನಿರ್ಣಯ:** ದಿನಾಂಕ 17.01.2020ರಂದು ನಡೆದ ಖರೀದಿ ಸಮಿತಿಯ ಶಿಫಾರಸ್ಸಿನಂತೆ ಮಂಗಳೂರು ವಿಶ್ವವಿದ್ಯಾನಿಲಯದ ವಿವಿಧ ಕಛೇರಿ/ವಿಭಾಗಗಳಿಗೆ ಪ್ರಿಂಟೆಡ್ ಐಟಂ ಲೇಖನ ಸಾಮಾಗ್ರಿಗಳನ್ನು M/s Sudha Art Printers, Someshwara ಇವರಿಂದ ರೂ.2,43,969/– (ತೆರಿಗೆ ಸೇರಿ)ರ ವೆಚ್ಚದಲ್ಲಿ ಖರೀದಿಸುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ: ಸಾ.ಸ.1:04(2020)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿರುವ ಸ್ವಾಯತ್ತ ಕಾಲೇಜುಗಳ ಕಾರ್ಯವೈಖರಿಯನ್ನು ವಾರ್ಷಿಕವಾಗಿ ಮರುಪರಿಶೀಲನೆ ಹಾಗೂ ಮರು ಮೌಲ್ಯಮಾಪನಗೊಳಿಸಲು ಸಮಿತಿ ರಚನೆ ಬಗ್ಗೆ

**ನಿರ್ಣಯ:** ಮಂಗಳೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿರುವ ಸ್ವಾಯತ್ತ ಕಾಲೇಜುಗಳ ಕಾರ್ಯವೈಖರಿಯನ್ನು ವಾರ್ಷಿಕವಾಗಿ ಮರುಪರಿಶೀಲನೆ ಹಾಗೂ ಮರು ಮೌಲ್ಯಮಾಪನಗೊಳಿಸಲು ಸಮಿತಿಯನ್ನು ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ:ಸಾ.ಸ.1:05(2020)

**ವಿಷಯ:** ಶೈಕ್ಷಣಿಕ ವರ್ಷ 2019–20ನೇ ಸಾಲಿಗೆ ಆಳ್ವಾಸ್ ಕಾಲೇಜು, ಮೂಡಬಿದಿರೆ ಎಂಬ ವಿದ್ಯಾ ಸಂಸ್ಥೆಯಲ್ಲಿ B.Sc. [FND] ಕೋರ್ಸಿಗೆ ಪ್ರವೇಶಾತಿ ಪಡೆದ Mr. Dhieu Jiel David ಅವರಿಗೆ ಅರ್ಹತಾ ಪ್ರಮಾಣ ಪತ್ರ ನೀಡುವ ಬಗ್ಗೆ

**ನಿರ್ಣಯ:** ದಿನಾಂಕ 19.12.2019ರಂದು ನಡೆದ ಡೀನರುಗಳ ಸಮಿತಿಯ ನಿರ್ಣಯವನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ:ಸಾ.ಸ.1:06(2020)

**ವಿಷಯ:** ಸಂಯೋಜಿತ ಕಾಲೇಜುಗಳಲ್ಲಿ ನಡೆಸಲ್ಪಡುವ ಎಲ್ಲಾ ಸ್ನಾತಕೋತ್ತರ ಕೋರ್ಸುಗಳ ಸರಕಾರಿ ಕೋಟಾದ ವಿದ್ಯಾರ್ಥಿಗಳ ಬೋಧನಾ ಶುಲ್ಕವನ್ನು ಸಂಬಂಧಪಟ್ಟ ಕಾಲೇಜುಗಳಿಗೆ ಮರು ಪಾವತಿಸುವ ಬಗ್ಗೆ

**ನಿರ್ಣಯ:** ಶೈಕ್ಷಣಿಕ ವರ್ಷ 2019–20ನೇ ಸಾಲಿನಲ್ಲಿ ವಿವಿಧ ಸ್ನಾತಕೋತ್ತರ ಕೋರ್ಸುಗಳಿಗೆ ಪ್ರವೇಶ ಪಡೆದ ಸಂಯೋಜಿತ ಕಾಲೇಜುಗಳ ಸರಕಾರಿ ಕೋಟಾದ ವಿದ್ಯಾರ್ಥಿಗಳ ಬೋಧನಾ ಶುಲ್ಕವನ್ನು ಸಂಬಂಧಪಟ್ಟ ಕಾಲೇಜುಗಳಿಗೆ ಮರು ಪಾವತಿ ಮಾಡುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ:ಸಾ.ಸ.1:07(2020)

**ವಿಷಯ:** ಶ್ರೀಮತಿ ಪ್ರಭಾವತಿ, ಪ್ರಥಮ ದರ್ಜೆ ಸಹಾಯಕರು, ಕುಲಸಚಿವರ ಕಚೇರಿ, ಇವರಿಗೆ ವಿಶ್ವವಿದ್ಯಾನಿಲಯದ ಸೇವೆಯಿಂದ ಸ್ವಯಂ ನಿವೃತ್ತಿ ಹೊಂದಲು ಅನುಮತಿ ನೀಡುವ ಬಗ್ಗೆ

**ನಿರ್ಣಯ:** ಶ್ರೀಮತಿ ಪ್ರಭಾವತಿ, ಪ್ರಥಮ ದರ್ಜೆ ಸಹಾಯಕರು, ಕುಲಸಚಿವರ ಕಚೇರಿ, ಇವರಿಗೆ ದಿನಾಂಕ 30.04.2020ರ ಅಪರಾಹ್ನದಿಂದ ಅನ್ವಯವಾಗುವಂತೆ ವಿಶ್ವವಿದ್ಯಾನಿಲಯದ ಸೇವೆಯಿಂದ ಸ್ವಯಂ ನಿವೃತ್ತಿ ಹೊಂದಲು ಅನುಮತಿ ನೀಡಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ:ಸಾ.ಸ.1:08(2020)

**ವಿಷಯ:** ಶ್ರೀ ಹೆಚ್. ವಿ. ಭೋಜ, ಅನುಚರರು, ಮಂಗಳೂರು ವಿಶ್ವವಿದ್ಯಾನಿಲಯ ಗ್ರಂಥಾಲಯ, ಇವರಿಗೆ ವಿಶ್ವವಿದ್ಯಾನಿಲಯದ ಸೇವೆಯಿಂದ ಸ್ವಯಂ ನಿವೃತ್ತಿ ಹೊಂದಲು ಅನುಮತಿ ನೀಡುವ ಬಗ್ಗೆ

**ನಿರ್ಣಯ:** ಶ್ರೀ ಹೆಚ್. ವಿ. ಭೋಜ, ಅನುಚರರು, ಮಂಗಳೂರು ವಿಶ್ವವಿದ್ಯಾನಿಲಯ ಗ್ರಂಥಾಲಯ, ಇವರಿಗೆ ದಿನಾಂಕ 30.03.2020ರ ಅಪರಾಹ್ನದಿಂದ ವಿಶ್ವವಿದ್ಯಾನಿಲಯದ ಸೇವೆಯಿಂದ ಸ್ವಯಂ ನಿವೃತ್ತಿ ಹೊಂದಲು ಅನುಮತಿ ನೀಡಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ:ಸಾ.ಸ.1:09(2020)

**ವಿಷಯ:** ಶ್ರೀ. ಎ. ಜಿ ವಿವೇಕಾನಂದ, ತಾಂತ್ರಿಕ ಅಧಿಕಾರಿ–1, ಮಂಗಳೂರು ವಿಶ್ವವಿದ್ಯಾನಿಲಯ ವಿಜ್ಞಾನ ಉಪಕರಣ ಕೇಂದ್ರ, ಮಂಗಳಗಂಗೋತ್ರಿ ಇವರಿಗೆ Govt. Tool Room & Training Centre (GTTC), Rajajinagar, Bengaluru ಇಲ್ಲಿ ಸ್ನಾತಕೋತ್ತರ ಪದವಿ (M.Tech) ವ್ಯಾಸಂಗ ಮಾಡಲು ವ್ಯಾಸಂಗ ರಜೆಯನ್ನು ಮಂಜೂರು ಮಾಡುವ ಬಗ್ಗೆ

**ನಿರ್ಣಯ:** ಶ್ರೀ. ಎ. ಜಿ ವಿವೇಕಾನಂದ, ತಾಂತ್ರಿಕ ಅಧಿಕಾರಿ–1, ಮಂಗಳೂರು ವಿಶ್ವವಿದ್ಯಾನಿಲಯ ವಿಜ್ಞಾನ ಉಪಕರಣ ಕೇಂದ್ರ, ಮಂಗಳಗಂಗೋತ್ರಿ ಇವರಿಗೆ ಸ್ನಾತಕೋತ್ತರ ಪದವಿ (M.Tech) ವ್ಯಾಸಂಗ ಮಾಡಲು ನವೆಂಬರ್ 2019ರಿಂದ ಎರಡು ವರ್ಷಗಳ ಅವಧಿಗೆ ವ್ಯಾಸಂಗ ರಜೆಯನ್ನು ಮಂಜೂರು ಮಾಡುವ ಪ್ರಸ್ತಾವನೆಯನ್ನು ಘಟನೋತ್ತರವಾಗಿ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ:ಸಾ.ಸ.1:10(2020)

**ವಿಷಯ:** ಡಾ. ವೀರಭದ್ರಪ್ಪ ಸಹ ಪ್ರಾಧ್ಯಾಪಕರು, ಗಣಕ ವಿಜ್ಞಾನ ವಿಭಾಗ, ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಇವರಿಗೆ University of Barcelona, Spain ಇಲ್ಲಿ ನಡೆಯಲಿರುವ EQUAMBI Project ನ ಸಭೆಯಲ್ಲಿ ಭಾಗವಹಿಸಲು ಅನುಮತಿ ನೀಡುವ ಬಗ್ಗೆ

**ನಿರ್ಣಯ:** ಡಾ. ವೀರಭದ್ರಪ್ಪ ಸಹ ಪ್ರಾಧ್ಯಾಪಕರು, ಗಣಕ ವಿಜ್ಞಾನ ವಿಭಾಗ, ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಇವರಿಗೆ ದಿನಾಂಕ 06.01.2020ರಿಂದ 09.01.2020ರವರೆಗೆ University of Barcelona, Spain ಇಲ್ಲಿ ನಡೆಯಲಿರುವ EQUAMBI Projectನ ಸಭೆಯಲ್ಲಿ ವಿಶ್ವವಿದ್ಯಾನಿಲಯಕ್ಕೆ ಯಾವುದೇ ಆರ್ಥಿಕ ಹೊರೆ ಇಲ್ಲದಂತೆ ಭಾಗವಹಿಸಲು ಅನುಮತಿ ಹಾಗೂ ದಿನಾಂಕ 06.01.2020ರಿಂದ 10.02.2020ರವರೆಗೆ ಅಧಿಕೃತ ಕಾರ್ಯ ನಿಮಿತ್ತ ರಜೆ ಮಂಜೂರು ಮಾಡುವ ಪ್ರಸ್ತಾವನೆಯನ್ನು ಘಟನೋತ್ತರವಾಗಿ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ:ಸಾ.ಸ.1:11(2020)

**ವಿಷಯ:** ಡಾ. ಹೆಚ್.ಎಲ್ ಶಶಿರೇಖ, ಪ್ರಾಧ್ಯಾಪಕರು, ಗಣಕ ವಿಜ್ಞಾನ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ ಇವರಿಗೆ University of Barcelona, Spain ಇಲ್ಲಿ ನಡೆಯಲಿರುವ EQUAMBI Projectನ ಸಭೆಯಲ್ಲಿ ಭಾಗವಹಿಸಲು ಅನುಮತಿ ನೀಡುವ ಬಗ್ಗೆ

**ನಿರ್ಣಯ:** ಡಾ. ಹೆಚ್.ಎಲ್ ಶಶಿರೇಖ, ಪ್ರಾಧ್ಯಾಪಕರು, ಗಣಕ ವಿಜ್ಞಾನ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ ಇವರಿಗೆ ದಿನಾಂಕ 06.01.2020ರಿಂದ 09.01.2020ರವರೆಗೆ University of Barcelona, Spain ಇಲ್ಲಿ ನಡೆಯಲಿರುವ EQUAMBI Projectನ ಸಭೆಯಲ್ಲಿ ವಿಶ್ವವಿದ್ಯಾನಿಲಯಕ್ಕೆ ಯಾವುದೇ ಆರ್ಥಿಕ ಹೊರೆ ಇಲ್ಲದಂತೆ ಭಾಗವಹಿಸಲು ಅನುಮತಿ ಹಾಗೂ ದಿನಾಂಕ 06.01.2020ರಿಂದ 10.02.2020ರವರೆಗೆ ಅಧಿಕೃತ ಕಾರ್ಯ ನಿಮಿತ್ತ ರಜೆ ಮಂಜೂರು ಮಾಡುವ ಪ್ರಸ್ತಾವನೆಯನ್ನು ಘಟನೋತ್ತರವಾಗಿ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ:ಸಾ.ಸ.1:12(2020)

**ವಿಷಯ:** DST-SERB ಪ್ರಾಜೆಕ್ಟ್, ಭೌತಶಾಸ್ತ್ರ ವಿಭಾಗ –Spray Pyrolysis ಉಪಕರಣ ಖರೀದಿ ಬಗ್ಗೆ

**ನಿರ್ಣಯ:** ದಿನಾಂಕ 17.01.2020ರಂದು ನಡೆದ ಖರೀದಿ ಸಮಿತಿಯ ಶಿಫಾರಸ್ಸಿನಂತೆ ಭೌತಶಾಸ್ತ್ರ ವಿಭಾಗದ DST-SERB ಪ್ರಾಜೆಕ್ಟ್‌ಗೆ Spray Pyrolysis ಎಂಬ ಉಪಕರಣವನ್ನು ರೂ.5,64,300/– + ತೆರಿಗೆಯೊಂದಿಗೆ M/s Holmarc Opto-Mechatronics Pvt. Ltd., Kalamassery, Kochi ಇವರಿಂದ ಖರೀದಿಸುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ:ಸಾ.ಸ.1:13(2020)

**ವಿಷಯ:** Sujala Elfin Mineral Water Plant ಗಳ ಮುಂದಿನ ಎರಡು ವರ್ಷಗಳ ಅವಧಿಯ ವಾರ್ಷಿಕ ನಿರ್ವಹಣೆ ಬಗ್ಗೆ.

**ನಿರ್ಣಯ:** ಗ್ರಾಹಕರ/ಬಳಕೆದಾರರ ಪ್ರತಿಕ್ರಿಯೆಗಳನ್ನು ಸ್ವೀಕರಿಸಬೇಕು ಹಾಗೂ Third Party Audit ಮಾಡಿಸುವ ಷರತ್ತಿನೊಂದಿಗೆ ಮಂಗಳೂರು ವಿಶ್ವವಿದ್ಯಾನಿಲಯ ಆವರಣ, ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು, ಫೀಲ್ಡ್ ಮಾರ್ಷಲ್ ಕೆ. ಎಂ. ಕಾರ್ಯಪ್ಪ ಕಾಲೇಜು, ಮಡಿಕೇರಿ ಮತ್ತು ಸ್ನಾತಕೋತ್ತರ ಕೇಂದ್ರ, ಚಿಕ್ಕ ಅಳುವಾರಗಳಲ್ಲಿ ಅಳವಡಿಸಿರುವ 33 ಸಂಖ್ಯೆಯ Sujala Elfin Mineral Water Plant ಗಳ ಮುಂದಿನ ಎರಡು ವರ್ಷಗಳ ಅವಧಿಯ ವಾರ್ಷಿಕ ನಿರ್ವಹಣೆಯನ್ನು ರೂ.11,26,950/–ರ ವೆಚ್ಚದಲ್ಲಿ ನಿರ್ವಹಿಸಲು M/s SKF Elixer India Pvt. Ltd., Moodbidri, Mangalore ಇವರಿಗೆ ಮಂಜೂರಾತಿ ನೀಡುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ:ಸಾ.ಸ.1:14(2020)

**ವಿಷಯ:** ಗ್ರಾಮೀಣ ಬ್ಯಾಂಕಿಂಗ್ ಮತ್ತು ನಿರ್ವಹಣಾ ಪೀಠ, ಮಂಗಳೂರು ವಿಶ್ವವಿದ್ಯಾನಿಲಯ, ಇಲ್ಲಿ ತಾತ್ಕಾಲಿಕ ನೆಲೆಯಲ್ಲಿ ಬೆರಳಚ್ಚುಗಾರ – ವ – ಗುಮಾಸ್ತರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಶ್ರೀ ಎಂ.ಸೀತಾರಾಮ ಇವರು ತಮ್ಮ ಸೇವೆಯನ್ನು ಖಾಯಂಗೊಳಿಸುವ ಬಗ್ಗೆ ಹೂಡಿರುವ ದಾವೆಗೆ ಸಂಬಂಧಿಸಿ, ವಿಶ್ವವಿದ್ಯಾನಿಲಯವು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿರುವ ಮೇಲ್ಮನವಿ ಸಂಖ್ಯೆ: ಡಬ್ಲ್ಯೂಎ:3659/2012(ಎಸ್–ಆರ್‌ಇಎಸ್) ದಿನಾಂಕ 23.10.2019 ರ ತೀರ್ಪಿನ ಅನುಷ್ಠಾನದ ಬಗ್ಗೆ

**ನಿರ್ಣಯ:** ಸದರಿ ತೀರ್ಪಿನ ಬಗ್ಗೆ ವಿಶ್ವವಿದ್ಯಾನಿಲಯದ ವತಿಯಿಂದ ಕಾನೂನು ಅಭಿಪ್ರಾಯ ಪಡೆಯಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಾರ್ವತ್ರಿಕ:ಸಾ.ಸ.1:15(2020)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯ ಆವರಣದ ಕಟ್ಟಡಗಳ ಶುಚಿತ್ವ ಕಾರ್ಯಕ್ಕಾಗಿ ಅಗತ್ಯವಿರುವ ಸಾಮಾಗ್ರಿಗಳನ್ನು ಒಂದು ವರ್ಷದ ಅವಧಿಗೆ ಒದಗಿಸುವ ಕುರಿತು

**ನಿರ್ಣಯ:** ದಿನಾಂಕ 17.01.2020ರಂದು ನಡೆದ ಖರೀದಿ ಸಮಿತಿಯ ಶಿಫಾರಸ್ಸಿನಂತೆ ಒಂದು ವರ್ಷದ ಅವಧಿಗೆ ಮಂಗಳೂರು ವಿಶ್ವವಿದ್ಯಾನಿಲಯ ಆವರಣದ ಕಟ್ಟಡಗಳ ಶುಚಿತ್ವ ಕಾರ್ಯಕ್ಕಾಗಿ ಅಗತ್ಯವಿರುವ ಸಾಮಾಗ್ರಿಗಳನ್ನು ರೂ.5,72,422.50ರ ವೆಚ್ಚದಲ್ಲಿ M/s Gulab Cosmatics, Beebi Alabi Road, Mangalore ಇವರಿಂದ ಖರೀದಿಸುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಪ.ಜಾ/ಪ.ಪಂ. ಘಟಕ:ಸಾ.ಸ.1:16(2020)

**ವಿಷಯ:** ದಿನಾಂಕ 12.12.2019 ರಂದು ನಡೆದ ಪರಿಶಿಷ್ಟ ಜಾತಿ/ಪಂಗಡಗಳ ಸ್ಥಾಯಿ ಸಮಿತಿ ಸಭೆಯ ನಿರ್ಣಯಗಳನ್ನು ಅನುಷ್ಠಾನಗೊಳಿಸುವ ಬಗ್ಗೆ

**ನಿರ್ಣಯ:** ದಿನಾಂಕ 12.12.2019ರಂದು ನಡೆದ ಪರಿಶಿಷ್ಟ ಜಾತಿ/ಪಂಗಡಗಳ ಸ್ಥಾಯಿ ಸಮಿತಿಯ ಶಿಫಾರಸ್ಸುಗಳನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಪರೀಕ್ಷಾಂಗ:ಸಾ.ಸ.1:17(2020)

**ವಿಷಯ:** ಅಕ್ಟೋಬರ್/ನವೆಂಬರ್ 2019ರಲ್ಲಿ ಜರುಗಿದ ವಿಶ್ವವಿದ್ಯಾನಿಲಯದ ವಿವಿಧ ಪದವಿ ಪರೀಕ್ಷೆಗಳಲ್ಲಿ ಪರೀಕ್ಷಾ ಅವ್ಯವಹಾರ ನಡೆಸಿದ ವಿದ್ಯಾರ್ಥಿಗಳ ಬಗ್ಗೆ ತನಿಖಾ ವರದಿ

**ನಿರ್ಣಯ:** ಅಕ್ಟೋಬರ್/ನವೆಂಬರ್ 2019ರಲ್ಲಿ ಜರುಗಿದ ವಿಶ್ವವಿದ್ಯಾನಿಲಯದ ವಿವಿಧ ಪದವಿ ಪರೀಕ್ಷೆಗಳಲ್ಲಿ ಪರೀಕ್ಷಾ ಅವ್ಯವಹಾರ ನಡೆಸಿದ ವಿದ್ಯಾರ್ಥಿಗಳ ಬಗ್ಗೆ ವಿಶ್ವವಿದ್ಯಾನಿಲಯ ಪರೀಕ್ಷಾ ಅವ್ಯವಹಾರ ತನಿಖಾ ಸಮಿತಿಯು ದಿನಾಂಕ 19.12.2019, 07.01.2020 ಮತ್ತು 16.01.2020ರಂದು ನಡೆದ ಸಭೆಗಳಲ್ಲಿ ಕೂಲಂಕಷವಾಗಿ ತನಿಖೆ ನಡೆಸಿ ಸಲ್ಲಿಸಿರುವ ತನಿಖಾ ವರದಿಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಪರೀಕ್ಷಾಂಗ:ಸಾ.ಸ.1:18(2020)

**ವಿಷಯ:** ಪಿಹೆಚ್.ಡಿ. ಪದವಿ ಪ್ರದಾನ ಮಾಡಿದ ಬಗ್ಗೆ

**ನಿರ್ಣಯ:** ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ವಿವಿಧ ವಿಷಯಗಳಲ್ಲಿ ಪಿಹೆಚ್. ಡಿ. ನಡೆಸುತ್ತಿದ್ದ ವಿದ್ಯಾರ್ಥಿಗಳ ಮೌಖಿಕ ಪರೀಕ್ಷಾ ವರದಿ ಹಾಗೂ ಕ್ರೋಢೀಕೃತ ಮೌಲ್ಯಮಾಪನ ವರದಿಯಲ್ಲಿ ಮಾಡಿರುವ ಶಿಫಾರಸ್ಸಿನಂತೆ ವಿದ್ಯಾರ್ಥಿಗಳಿಗೆ ಪಿಹೆಚ್. ಡಿ ಪದವಿ ಪ್ರದಾನ ಮಾಡಿರುವ ಪ್ರಸ್ತಾವನೆಯನ್ನು ಘಟನೋತ್ತರವಾಗಿ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಕಾನೂನು ಘಟಕ: ಸಾ.ಸ.1:19(2020)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ "Litigation Rules" ರಚಿಸುವ ಬಗ್ಗೆ

**ನಿರ್ಣಯ:** ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ "Litigation Rules" ರಚಿಸುವ ಪ್ರಸ್ತಾವನೆಯನ್ನು ಮುಂದೂಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ:ಸಾ.ಸ.1:20(2020)

**ವಿಷಯ:** ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಸಹಾಯಕ ಪ್ರಾಧ್ಯಾಪಕ ಹುದ್ದೆಗೆ ನೇಮಕಾತಿಗೊಂಡಿರುವ ಶ್ರೀಮತಿ ಸುಶೀಲ ಕೆ. ಲೆಂಕನ್ನಾವರ್, ಸಹಾಯಕ ಪ್ರಾಧ್ಯಾಪಕರು, ಭೌತಶಾಸ್ತ್ರ ವಿಭಾಗ, ಫೀಲ್ಡ್ ಮಾರ್ಷಲ್ ಕೆ.ಎಂ, ಕಾರ್ಯಪ್ಪ ಕಾಲೇಜು ಇವರನ್ನು ವಿಶ್ವವಿದ್ಯಾನಿಲಯದ ಸೇವೆಯಿಂದ ಬಿಡುಗಡೆಗೊಳಿಸಿರುವ ಬಗ್ಗೆ ಹಾಗೂ ಸಹಾಯಕ ಪ್ರಾಧ್ಯಾಪಕ ಹುದ್ದೆಯ ಹಕ್ಕು ಸ್ವಾಮ್ಯವನ್ನು ಎರಡು ವರ್ಷಗಳವರೆಗೆ ಕಾಯ್ದಿರಿಸುವ ಬಗ್ಗೆ

**ನಿರ್ಣಯ:** ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಸಹಾಯಕ ಪ್ರಾಧ್ಯಾಪಕ ಹುದ್ದೆಗೆ ನೇಮಕಾತಿಗೊಂಡಿರುವ ಶ್ರೀಮತಿ ಸುಶೀಲ ಕೆ. ಲೆಂಕನ್ನಾವರ್, ಸಹಾಯಕ ಪ್ರಾಧ್ಯಾಪಕರು, ಭೌತಶಾಸ್ತ್ರ ವಿಭಾಗ, ಫೀಲ್ಡ್ ಮಾರ್ಷಲ್ ಕೆ.ಎಂ, ಕಾರ್ಯಪ್ಪ ಕಾಲೇಜು ಇವರನ್ನು ವಿಶ್ವವಿದ್ಯಾನಿಲಯದ ಸೇವೆಯಿಂದ ಬಿಡುಗಡೆಗೊಳಿಸಿರುವ ಪ್ರಸ್ತಾವನೆಯನ್ನು ಘಟನೋತ್ತರವಾಗಿ ಅನುಮೋದಿಸಲಾಯಿತು ಹಾಗೂ ಕಾಲೇಜಿನ ಭೌತಶಾಸ್ತ್ರ ವಿಷಯದ ಸಹಾಯಕ ಪ್ರಾಧ್ಯಾಪಕ ಹುದ್ದೆಯ ಹಕ್ಕು ಸ್ವಾಮ್ಯವನ್ನು ಎರಡು ವರ್ಷಗಳವರೆಗೆ ಕಾಯ್ದಿರಿಸುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿ೪ವಿ:ಸಾ.ಸ.1:21(2020)

**ವಿಷಯ:** ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗ ಮಂಗಳೂರು ವಿಶ್ವವಿದ್ಯಾನಿಲಯ – ಧಾರಣಾಗುತ್ತಿಗೆ ದರದಲ್ಲಿ 5 KVA Online UPS ಮತ್ತು ಬ್ಯಾಟರಿಗಳ ಖರೀದಿಗೆ ಮಂಜೂರಾತಿ ನೀಡುವ ಬಗ್ಗೆ.

**ನಿರ್ಣಯ:** ಮಂಗಳೂರು ವಿಶ್ವವಿದ್ಯಾನಿಲಯದ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗಕ್ಕೆ 5 KVA Online UPS ಮತ್ತು ಬ್ಯಾಟರಿಗಳನ್ನು ಅಧಿಕೃತ ಜ್ಞಾಪನ ಸಂಖ್ಯೆ:ಮಂವಿವಿ/ಅಭಿವೃದ್ಧಿ/49/2017–18/ಡಿ4, 02.01.2020ರಲ್ಲಿ ಅನುಮೋದನೆಗೊಂಡ ಧಾರಣಾಗುತ್ತಿಗೆ ದರದಲ್ಲಿ M/s Techser Power Solutions Pvt. Ltd., Mangalore ಇವರಿಂದ ಹಳೆಯ ಯುಪಿಎಸ್ ಮತ್ತು ಬ್ಯಾಟರಿಗಳ ವಿನಿಮಯದೊಂದಿಗೆ ಖರೀದಿಸುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ:ಸಾ.ಸ.1:22(2020)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕೋತ್ತರ ವಿಭಾಗಗಳು/ಕೋರ್ಸುಗಳು/ಕೇಂದ್ರಗಳು/ಘಟಕ ಕಾಲೇಜುಗಳಿಗೆ ಅಗತ್ಯವಿರುವ ಪ್ರೊಜೆಕ್ಟರ್ ಮತ್ತು Interactive Class Room ಉಪಕರಣಗಳನ್ನು ಧಾರಣಾ ಗುತ್ತಿಗೆ ದರ ನಿಗದಿಪಡಿಸಿ ಖರೀದಿಸುವ ಬಗ್ಗೆ

**ನಿರ್ಣಯ:** ದಿನಾಂಕ 17.01.2020ರಂದು ನಡೆದ ಖರೀದಿ ಸಮಿತಿಯ ಶಿಫಾರಸ್ಸಿನಂತೆ ಮಂಗಳೂರು ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕೋತ್ತರ ವಿಭಾಗಗಳು/ಕೋರ್ಸುಗಳು/ಕೇಂದ್ರಗಳು/ಘಟಕ ಕಾಲೇಜುಗಳಿಗೆ ಅಗತ್ಯವಿರುವ ಪ್ರೊಜೆಕ್ಟರ್ ಮತ್ತು Interactive Class Room ಉಪಕರಣಗಳನ್ನು ಒಂದು ವರ್ಷದ ಅವಧಿಗೆ ಧಾರಣಾ ಗುತ್ತಿಗೆ ದರ ನಿಗದಿಪಡಿಸಿ ಖರೀದಿಸುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ:ಸಾ.ಸ.1:23(2020)

**ವಿಷಯ:** ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಭಾಗ ಮಂಗಳೂರು ವಿಶ್ವವಿದ್ಯಾನಿಲಯ – ಧಾರಣಾಗುತ್ತಿಗೆ ದರದಲ್ಲಿ 5 KVA Online UPS ಮತ್ತು ಬ್ಯಾಟರಿಗಳ ಖರೀದಿಗೆ ಮಂಜೂರಾತಿ ನೀಡುವ ಬಗ್ಗೆ.

**ನಿರ್ಣಯ:** ಮಂಗಳೂರು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಭಾಗಕ್ಕೆ 5 KVA Online UPS ಮತ್ತು ಬ್ಯಾಟರಿಗಳನ್ನು ಅಧಿಕೃತ ಜ್ಞಾಪನ ಸಂಖ್ಯೆ:ಮಂವಿವಿ/ಅಭಿವೃದ್ಧಿ/49/2017–18/ಡಿ4, 02.01.2020ರಲ್ಲಿ ಅನುಮೋದನೆಗೊಂಡ ಧಾರಣಾಗುತ್ತಿಗೆ ದರದಲ್ಲಿ M/s Techser Power Solutions Pvt. Ltd., Mangalore ಇವರಿಂದ ಹಳೆಯ ಯುಪಿಎಸ್ ಮತ್ತು ಬ್ಯಾಟರಿಗಳ ವಿನಿಮಯದೊಂದಿಗೆ ಖರೀದಿಸುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟ್:ಸಾ.ಸ.1:24(2020)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಅರ್ಥಶಾಸ್ತ್ರ ವಿಭಾಗದ ಅಧ್ಯಕ್ಷರ ನೇಮಕಾತಿ ಬಗ್ಗೆ.

**ನಿರ್ಣಯ:** ಪ್ರೊ. ವಿಶ್ವನಾಥ ಇವರನ್ನು ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಅರ್ಥಶಾಸ್ತ್ರ ವಿಭಾಗಕ್ಕೆ ದಿನಾಂಕ 01.04.2020ರಿಂದ 30.06.2020ರ ವರೆಗೆ ಅಥವಾ ಮುಂದಿನ ಆದೇಶದವರೆಗೆ ಪ್ರಭಾರ ಅಧ್ಯಕ್ಷರನ್ನಾಗಿ ನೇಮಕಾತಿ ಮಾಡುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟ್:ಸಾ.ಸ.1:25(2020)

**ವಿಷಯ:** ಸ್ಪೀಚ್ ಲ್ಯಾಂಗ್ವೇಜ್ ಆ್ಯಂಡ್ ಹಿಯರಿಂಗ್ ಸಂಯುಕ್ತ ಅಧ್ಯಯನ ಮಂಡಳಿಯನ್ನು ಪುನರ್ರಚಿಸುವ ಬಗ್ಗೆ.

**ನಿರ್ಣಯ:** ಸ್ಪೀಚ್ ಲ್ಯಾಂಗ್ವೇಜ್ ಆ್ಯಂಡ್ ಹಿಯರಿಂಗ್ ಸಂಯುಕ್ತ ಅಧ್ಯಯನ ಮಂಡಳಿಯನ್ನು ಪುನರ್ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಪ.ಜಾ/ಪ.ಪಂ. ಘಟಕ:ಸಾ.ಸ.1:26(2020)

**ವಿಷಯ:** ಶ್ರೀ ರಂಗಪ್ಪ ಸಂಶೋಧನಾ ವಿದ್ಯಾರ್ಥಿ, ಸ್ನಾತಕೋತ್ತರ ಯೋಗ ವಿಜ್ಞಾನ ವಿಭಾಗ ಇವರಿಗೆ ವಿದೇಶದಲ್ಲಿ ನಡೆಯುವ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಿ ಸಂಶೋಧನಾ ಪತ್ರಿಕೆಯನ್ನು ಮಂಡಿಸಲು ಅನುಮತಿ ಹಾಗೂ ತತ್ಸಂಬಂಧ ತಗಲುವ ಆರ್ಥಿಕ ಸಹಾಯಧನ ಮುಂಗಡ ನೀಡುವ ಬಗ್ಗೆ.

**ನಿರ್ಣಯ:** ಶ್ರೀ ರಂಗಪ್ಪ ಸಂಶೋಧನಾ ವಿದ್ಯಾರ್ಥಿ, ಸ್ನಾತಕೋತ್ತರ ಯೋಗ ವಿಜ್ಞಾನ ವಿಭಾಗ ಇವರಿಗೆ ದಿನಾಂಕ 21.05.2020ರಿಂದ 22.05.2020ರವರೆಗೆ Valencia, Spain ಇಲ್ಲಿ ನಡೆಯಲಿರುವ 3rd International Conference on Obesity and Diabetes 2020 ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಿ ಸಂಶೋಧನಾ ಪತ್ರಿಕೆಯನ್ನು ಮಂಡಿಸಲು ಅನುಮತಿ ಹಾಗೂ ಸದರಿ ಸಮ್ಮೇಳನಕ್ಕೆ ಹಾಜರಾಗಲು ತಗಲುವ ವೆಚ್ಚ ರೂ.1,82,620/– ಮುಂಗಡವನ್ನು ಮಂಜೂರು ಮಾಡುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಪ.ಜಾ/ಪ.ಪಂ. ಘಟಕ:ಸಾ.ಸ.1:27(2020)

**ವಿಷಯ:** ಕು. ರಶ್ಮಿತಾ, ಸಂಶೋಧನಾ ವಿದ್ಯಾರ್ಥಿನಿ, ಸ್ನಾತಕೋತ್ತರ ಯೋಗ ವಿಜ್ಞಾನ ವಿಭಾಗ ಇವರಿಗೆ ವಿದೇಶದಲ್ಲಿ ನಡೆಯುವ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಿ ಸಂಶೋಧನಾ ಪತ್ರಿಕೆಯನ್ನು ಮಂಡಿಸಲು ಅನುಮತಿ ಹಾಗೂ ತತ್ಸಂಬಂಧ ತಗಲುವ ಆರ್ಥಿಕ ಸಹಾಯಧನ ಮುಂಗಡ ನೀಡುವ ಬಗ್ಗೆ.

**ನಿರ್ಣಯ:** ಕು. ರಶ್ಮಿತಾ, ಸಂಶೋಧನಾ ವಿದ್ಯಾರ್ಥಿನಿ, ಸ್ನಾತಕೋತ್ತರ ಯೋಗ ವಿಜ್ಞಾನ ವಿಭಾಗ ಇವರಿಗೆ ದಿನಾಂಕ 21.05.2020ರಿಂದ 22.05.2020ರವರೆಗೆ Valencia, Spain ಇಲ್ಲಿ ನಡೆಯಲಿರುವ 3rd International Conference on Obesity and Diabetes 2020 ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಿ ಸಂಶೋಧನಾ ಪತ್ರಿಕೆಯನ್ನು ಮಂಡಿಸಲು ಅನುಮತಿ ಹಾಗೂ ಸದರಿ ಸಮ್ಮೇಳನಕ್ಕೆ ಹಾಜರಾಗಲು ತಗಲುವ ವೆಚ್ಚ ರೂ.1,82,620/- ಮುಂಗಡವನ್ನು ಮಂಜೂರು ಮಾಡುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಪರೀಕ್ಷಾಂಗ:ಸಾ.ಸ.1:28(2020)

**ವಿಷಯ:** ಪಿ.ಹೆಚ್.ಡಿ ಕೋರ್ಸ್ ವರ್ಕ್ 2018-19 - ಪರೀಕ್ಷಾ ಮಂಡಳಿ ರಚನೆ – ಮಂಜೂರಾತಿ ಬಗ್ಗೆ.

**ನಿರ್ಣಯ:** ದಿನಾಂಕ 02.01.2020ರಂದು ನಡೆದ ಪರೀಕ್ಷಕರ ಆಯ್ಕೆ ಮಂಡಳಿ ಸಭೆಯ ಶಿಫಾರಸ್ಸಿನಂತೆ ಫೆಬ್ರವರಿ 2020ರಲ್ಲಿ ನಡೆದ ಪಿಹೆಚ್.ಡಿ. ಕೋರ್ಸ್‌ವರ್ಕ್ ಪರೀಕ್ಷೆಗೆ ರಚಿಸಲಾದ ಪರೀಕ್ಷಾ ಮಂಡಳಿಯನ್ನು ಘಟನೋತ್ತರವಾಗಿ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಾರ್ವತ್ರಿಕ:ಸಾ.ಸ.1:29(2020)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ವಿವಿಧ ಕ್ರೀಡಾ ಕಾರ್ಯಕ್ರಮಗಳಿಗೆ ಸಂಬಂಧಿಸಿ ದಿನಾಂಕ 16.11.2019ರಂದು ನಡೆದ ಕ್ರೀಡಾ ಸಲಹಾ ಸಮಿತಿ ಸಭೆಯ ನಡಾವಳಿಗೆ ಅನುಮೋದನೆ ನೀಡುವ ಬಗ್ಗೆ.

**ನಿರ್ಣಯ:** ಮಂಗಳೂರು ವಿಶ್ವವಿದ್ಯಾನಿಲಯದ ವಿವಿಧ ಕ್ರೀಡಾ ಕಾರ್ಯಕ್ರಮಗಳಿಗೆ ಸಂಬಂಧಿಸಿ ದಿನಾಂಕ 16.11.2019ರಂದು ನಡೆದ ಕ್ರೀಡಾ ಸಲಹಾ ಸಮಿತಿ ಸಭೆಯ ನಡಾವಳಿಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಮಂವಿ/ಇಡಿ:ಸಾ.ಸ.1:30(2020)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯ ಆವರಣದ ವಿಜ್ಞಾನ ಸಂಕೀರ್ಣ ಕಟ್ಟಡದ ವಿಶೇಷ ದುರಸ್ತಿ ಅಂದಾಜುಪಟ್ಟಿಗೆ ಅನುಮೋದನೆ ನೀಡುವ ಬಗ್ಗೆ – RUSA ಅನುದಾನ -ಅಂದಾಜುಪಟ್ಟಿ ಮೊತ್ತ ₹ 75.84 ಲಕ್ಷ

**ನಿರ್ಣಯ:** ರಾಷ್ಟ್ರೀಯ ಉಚ್ಛತರ್ ಶಿಕ್ಷಾ ಅಭಿಯಾನ್ (RUSA) ಯೋಜನೆಯಡಿಯಲ್ಲಿ ಮಂಗಳೂರು ವಿಶ್ವವಿದ್ಯಾನಿಲಯ ಆವರಣದ ವಿಜ್ಞಾನ ಸಂಕೀರ್ಣ ಕಟ್ಟಡದ ವಿಶೇಷ ದುರಸ್ತಿ ಕಾಮಗಾರಿಗೆ ದಿನಾಂಕ 03.02.2020ರ ಕಟ್ಟಡ ಸಮಿತಿಯ ಶಿಫಾರಸ್ಸಿನಂತೆ ರೂ.75.84 ಲಕ್ಷ ಮೊತ್ತದ ಅಂದಾಜುಪಟ್ಟಿಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಮಂವಿ/ಇಡಿ:ಸಾ.ಸ.1:31(2020)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯ ಆವರಣದಲ್ಲಿರುವ ಉದ್ಯೋಗ ಮಾಹಿತಿ ಕೇಂದ್ರ ಕಟ್ಟಡದ ಮೊದಲನೇ ಅಂತಸ್ತಿನಲ್ಲಿ ಪರಿಸರ ವಿಜ್ಞಾನ ವಿಭಾಗ ಕಟ್ಟಡದ ನಿರ್ಮಾಣ – (1ನೇ ಹಂತ RUSA ಅನುದಾನ) - ಅಂದಾಜುಪಟ್ಟಿ ಅನುಮೋದನೆ - ಅಂದಾಜುಪಟ್ಟಿ ಮೊತ್ತ ₹ 41.25 ಲಕ್ಷಗಳು

**ನಿರ್ಣಯ:** ರಾಷ್ಟ್ರೀಯ ಉಚ್ಛತರ್ ಶಿಕ್ಷಾ ಅಭಿಯಾನ್ (RUSA) ಯೋಜನೆಯಡಿಯಲ್ಲಿ ಮಂಗಳೂರು ವಿಶ್ವವಿದ್ಯಾನಿಲಯ ಆವರಣದಲ್ಲಿರುವ ಉದ್ಯೋಗ ಮಾಹಿತಿ ಕೇಂದ್ರ ಕಟ್ಟಡದ ಮೊದಲನೇ ಅಂತಸ್ತಿನಲ್ಲಿ ಪರಿಸರ ವಿಜ್ಞಾನ ವಿಭಾಗ ಕಟ್ಟಡದ ನಿರ್ಮಾಣ ಕಾಮಗಾರಿಗೆ ದಿನಾಂಕ 03.02.2020ರ ಕಟ್ಟಡ ಸಮಿತಿಯ ಶಿಫಾರಸ್ಸಿನಂತೆ ರೂ.41.25 ಲಕ್ಷ ಮೊತ್ತದ ಅಂದಾಜುಪಟ್ಟಿಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಮಂವಿ/ಇಡಿ:ಸಾ.ಸ.1:32(2020)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯ ಆವರಣದ ಜೀವ ವಿಜ್ಞಾನ ಮತ್ತು ಆನ್ವಯಿಕ ಪ್ರಾಣಿಶಾಸ್ತ್ರ ವಿಭಾಗಕ್ಕೆ ಸಂಬಂಧಿಸಿದ ಉಗ್ರಾಣ ಕೊಠಡಿಗೆ ಮೇಲ್ಭಾಗದಲ್ಲಿ ಪ್ರಯೋಗಾಲಯಕ್ಕಾಗಿ ಮೊದಲ ಅಂತಸ್ತನ್ನು ನಿರ್ಮಿಸುವುದು – RUSA ಅನುದಾನ – ಅಂದಾಜುಪಟ್ಟಿ ಮೊತ್ತ ₹ 20.00 ಲಕ್ಷ

**ನಿರ್ಣಯ:** ರಾಷ್ಟ್ರೀಯ ಉಚ್ಛತರ್ ಶಿಕ್ಷಾ ಅಭಿಯಾನ್ (RUSA) ಯೋಜನೆಯಡಿಯಲ್ಲಿ ಮಂಗಳೂರು ವಿಶ್ವವಿದ್ಯಾನಿಲಯ ಆವರಣದಲ್ಲಿರುವ ಜೀವ ವಿಜ್ಞಾನ ಮತ್ತು ಆನ್ವಯಿಕ ಪ್ರಾಣಿಶಾಸ್ತ್ರ ವಿಭಾಗಕ್ಕೆ ಸಂಬಂಧಿಸಿದ ಉಗ್ರಾಣ ಕೊಠಡಿಗೆ ಮೇಲ್ಭಾಗದಲ್ಲಿ ಪ್ರಯೋಗಾಲಯಕ್ಕಾಗಿ ಮೊದಲ ಅಂತಸ್ತನ್ನು ನಿರ್ಮಿಸುವ ಕಾಮಗಾರಿಗೆ ದಿನಾಂಕ 03.02.2020ರ ಕಟ್ಟಡ ಸಮಿತಿಯ ಶಿಫಾರಸ್ಸಿನಂತೆ ರೂ.20.00 ಲಕ್ಷ ಮೊತ್ತದ ಅಂದಾಜುಪಟ್ಟಿಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಮಂವಿ/ಇಡಿ: ಸಾ.ಸ.1:33(2020)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯ ಆವರಣದ ಜೀವ ವಿಜ್ಞಾನ ಮತ್ತು ಆನ್ವಯಿಕ ಪ್ರಾಣಿಶಾಸ್ತ್ರ ವಿಭಾಗಗಳ ತರಗತಿ ಕೊಠಡಿಗಳನ್ನು ಪ್ರಯೋಗಾಲಯವಾಗಿ ಪರಿವರ್ತಿಸುವುದು – RUSA ಅನುದಾನ – ಅಂದಾಜುಪಟ್ಟಿ ಮೊತ್ತ ₹ 28,63,480.00

**ನಿರ್ಣಯ:** ರಾಷ್ಟ್ರೀಯ ಉಚ್ಛತರ್ ಶಿಕ್ಷಾ ಅಭಿಯಾನ್ (RUSA) ಯೋಜನೆಯಡಿಯಲ್ಲಿ ಮಂಗಳೂರು ವಿಶ್ವವಿದ್ಯಾನಿಲಯ ಆವರಣದಲ್ಲಿರುವ ಜೀವ ವಿಜ್ಞಾನ ಮತ್ತು ಆನ್ವಯಿಕ ಪ್ರಾಣಿಶಾಸ್ತ್ರ ವಿಭಾಗಗಳ ತರಗತಿ ಕೊಠಡಿಗಳನ್ನು ಪ್ರಯೋಗಾಲಯವಾಗಿ ಪರಿವರ್ತಿಸುವ ಕಾಮಗಾರಿಗೆ ದಿನಾಂಕ 03.02.2020ರ ಕಟ್ಟಡ ಸಮಿತಿಯ ಶಿಫಾರಸ್ಸಿನಂತೆ ರೂ.28,63,480.00 ಮೊತ್ತದ ಅಂದಾಜುಪಟ್ಟಿಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಮಂವಿ/ಇಡಿ: ಸಾ.ಸ.1:34(2020)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯ ಆವರಣದ ವಿಜ್ಞಾನ ಸಂಕೀರ್ಣ ಕಟ್ಟಡದ ಮೊದಲ ಅಂತಸ್ತಿನ ರಸಾಯನಶಾಸ್ತ್ರ ವಿಭಾಗಕ್ಕೆ ಸಂಬಂಧಿಸಿದ L2 ಮತ್ತು L3 ತರಗತಿ ಕೊಠಡಿಗಳನ್ನು ಅನ್ವಯಿಕ ರಸಾಯನಶಾಸ್ತ್ರ ಪ್ರಯೋಗಾಲಯವನ್ನಾಗಿ ಪರಿವರ್ತಿಸುವುದು – ಲೆಕ್ಕಶೀರ್ಷಿಕೆ ಬದಲಾವಣೆ ಪ್ರಸ್ತಾವನೆ ಸಲ್ಲಿಕೆ.

**ನಿರ್ಣಯ:** ದಿನಾಂಕ 03.02.2020ರ ಕಟ್ಟಡ ಸಮಿತಿಯ ಶಿಫಾರಸ್ಸಿನಂತೆ ಮಂಗಳೂರು ವಿಶ್ವವಿದ್ಯಾನಿಲಯ ಆವರಣದ ವಿಜ್ಞಾನ ಸಂಕೀರ್ಣ ಕಟ್ಟಡದ ಮೊದಲ ಅಂತಸ್ತಿನ ರಸಾಯನಶಾಸ್ತ್ರ ವಿಭಾಗಕ್ಕೆ ಸಂಬಂಧಿಸಿದ L2 ಮತ್ತು L3 ತರಗತಿ ಕೊಠಡಿಗಳನ್ನು ಅನ್ವಯಿಕ ರಸಾಯನಶಾಸ್ತ್ರ ಪ್ರಯೋಗಾಲಯವನ್ನಾಗಿ ಪರಿವರ್ತಿಸುವ ಕಾಮಗಾರಿಯ ಲೆಕ್ಕಶೀರ್ಷಿಕೆ ಬದಲಾವಣೆಯ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಮಂವಿ/ಇಡಿ: ಸಾ.ಸ.1:35(2020)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯ ಆವರಣದ ಲೆಕ್ಚರ್ ಕಾಂಪ್ಲೆಕ್ಸ್ ಕಟ್ಟಡಕ್ಕೆ ಮಳೆ ನೀರು ಕೊಯಿಲು ವ್ಯವಸ್ಥೆಯನ್ನು ಅಳವಡಿಸುವುದು – RUSA ಅನುದಾನ

**ನಿರ್ಣಯ:** ರಾಷ್ಟ್ರೀಯ ಉಚ್ಛತರ್ ಶಿಕ್ಷಾ ಅಭಿಯಾನ್ (RUSA) ಯೋಜನೆಯಡಿಯಲ್ಲಿ ಮಂಗಳೂರು ವಿಶ್ವವಿದ್ಯಾನಿಲಯ ಆವರಣದ ಲೆಕ್ಚರ್ ಕಾಂಪ್ಲೆಕ್ಸ್ ಕಟ್ಟಡಕ್ಕೆ ಮಳೆ ನೀರು ಕೊಯಿಲು ವ್ಯವಸ್ಥೆಯನ್ನು ಅಳವಡಿಸುವ ಕಾಮಗಾರಿಗೆ ದಿನಾಂಕ 03.02.2020ರ ಕಟ್ಟಡ ಸಮಿತಿಯ ಶಿಫಾರಸ್ಸಿನಂತೆ ರೂ.35.75 ಲಕ್ಷ ಮೊತ್ತದ ಅಂದಾಜುಪಟ್ಟಿಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಮಂವಿ/ಇಡಿ: ಸಾ.ಸ.1:36(2020)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯ ಆವರಣದಲ್ಲಿರುವ ಮಾನವಿಕ ಶಾಸ್ತ್ರ ಕಟ್ಟಡ (Humanity building) ಕ್ಕೆ ಮಳೆ ನೀರು ಕೊಯಿಲು ವ್ಯವಸ್ಥೆ (Rain water harvesting) ಕಲ್ಪಿಸುವುದು – RUSA ಅನುದಾನದಲ್ಲಿ ಪ್ರಸ್ತಾವನೆ – ಅಂದಾಜುಪಟ್ಟಿ ಮೊತ್ತ ₹. 24.25 ಲಕ್ಷ

**ನಿರ್ಣಯ:** ಮಂಗಳೂರು ವಿಶ್ವವಿದ್ಯಾನಿಲಯ ಆವರಣದ ಮಾನವಿಕ ಶಾಸ್ತ್ರ ಕಟ್ಟಡ (Humanity building) ಕ್ಕೆ ಮಳೆ ನೀರು ಕೊಯಿಲು ವ್ಯವಸ್ಥೆ (Rain water harvesting) ಅಳವಡಿಸುವ ಕಾಮಗಾರಿಗೆ ದಿನಾಂಕ 03.02.2020ರ ಕಟ್ಟಡ ಸಮಿತಿಯ ಶಿಫಾರಸ್ಸಿನಂತೆ ರೂ.24.25 ಲಕ್ಷ ಮೊತ್ತದ ಆಡಳಿತಾತ್ಮಕ ಅನುಮೋದನೆಗೊಂಡ ಅಂದಾಜುಪಟ್ಟಿಯ ಲೆಕ್ಕಶೀರ್ಷಿಕೆಯನ್ನು 1506ರಿಂದ RUSA ಅನುದಾನ ಲೆಕ್ಕಶೀರ್ಷಿಕೆಗೆ ಬದಲಾವಣೆ ಮಾಡುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಮಂವಿ/ಇಡಿ: ಸಾ.ಸ.1:37(2020)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯ ಆವರಣದಲ್ಲಿರುವ ಮಂಗಳ ಅಡಿಟೋರಿಯಂ ಕಟ್ಟಡದ ಮುಂಭಾಗದಲ್ಲಿ ಇಂಟರ್‌ಲಾಕ್ ಹಾಗೂ ಮಳೆನೀರಿನ ಚರಂಡಿ ಒದಗಿಸುವ ಕಾಮಗಾರಿ – ಅಂದಾಜುಪಟ್ಟಿ ಅನುಮೋದನೆ – ಅಂದಾಜುಪಟ್ಟಿ ಮೊತ್ತ ₹ 74.00 ಲಕ್ಷಗಳು

**ನಿರ್ಣಯ:** ಮಂಗಳೂರು ವಿಶ್ವವಿದ್ಯಾನಿಲಯ ಆವರಣದಲ್ಲಿರುವ ಮಂಗಳ ಅಡಿಟೋರಿಯಂ ಕಟ್ಟಡದ ಮುಂಭಾಗದಲ್ಲಿ ಇಂಟರ್‌ಲಾಕ್ ಹಾಗೂ ಮಳೆನೀರಿನ ಚರಂಡಿ ನಿರ್ಮಾಣ ಕಾಮಗಾರಿಗೆ ದಿನಾಂಕ 03.02.2020ರ ಕಟ್ಟಡ ಸಮಿತಿಯ ಶಿಫಾರಸ್ಸಿನಂತೆ ರೂ.74.00 ಲಕ್ಷ ಮೊತ್ತದ ಅಂದಾಜುಪಟ್ಟಿಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಮಂವಿ/ಇಡಿ: ಸಾ.ಸ.1:38(2020)

**ವಿಷಯ:** ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಇಲ್ಲಿನ ಎಂ.ಬಿ.ಎ. ಬ್ಲಾಕ್‌ಗೆ 50 ಕೆವಿಎ ಡಿ.ಜಿ. ಸೆಟ್ ಅಳವಡಿಸುವ ಬಗ್ಗೆ – ಅಂದಾಜುಪಟ್ಟಿ ಅನುಮೋದನೆ ಬಗ್ಗೆ – ಅಂದಾಜುಪಟ್ಟಿ ಮೊತ್ತ ₹ 6.31 ಲಕ್ಷ

**ನಿರ್ಣಯ:** ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಇಲ್ಲಿನ ಎಂ.ಬಿ.ಎ. ಬ್ಲಾಕ್‌ಗೆ 50 ಕೆವಿಎ ಡಿ.ಜಿ. ಸೆಟ್ ಅಳವಡಿಸಲು ದಿನಾಂಕ 03.02.2020ರ ಕಟ್ಟಡ ಸಮಿತಿಯ ಶಿಫಾರಸ್ಸಿನಂತೆ ರೂ.6.31 ಲಕ್ಷ ಮೊತ್ತದ ಅಂದಾಜುಪಟ್ಟಿಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಮಂವಿ/ಇಡಿ: ಸಾ.ಸ.1:39(2020)

**ವಿಷಯ:** Extension of Management block and construction of class room over the first floor at University College Mangalore – ಹೆಚ್ಚುವರಿ ಪರಿಮಾಣ ಹಾಗೂ ಹೆಚ್ಚುವರಿ ಕಾಮಗಾರಿಗಳ ಅನುಮೋದನೆ ಬಗ್ಗೆ.

**ನಿರ್ಣಯ:** ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಇಲ್ಲಿನ ಮ್ಯಾನೇಜ್‌ಮೆಂಟ್ ಬ್ಲಾಕ್ ವಿಸ್ತರಣೆ ಮತ್ತು ಒಂದನೇ ಮಹಡಿಯಲ್ಲಿನ ತರಗತಿ ಕೊಠಡಿಗಳ ನಿರ್ಮಾಣ ಕಾಮಗಾರಿಗಳಿಗೆ ದಿನಾಂಕ 03.02.2020ರ ಕಟ್ಟಡ ಸಮಿತಿಯ ಶಿಫಾರಸ್ಸಿನಂತೆ ಹೆಚ್ಚುವರಿ ಪರಿಮಾಣ ಹಾಗೂ ಹೆಚ್ಚುವರಿ ಐಟಂಗಳ ರೂ.36,14,571.89 ಮೊತ್ತದ ಅಂದಾಜುಪಟ್ಟಿಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಮಂವಿ/ಇಡಿ: ಸಾ.ಸ.1:40(2020)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ಎಂ.ಬಿ.ಎ ಕಟ್ಟಡದಲ್ಲಿ ಅಳವಡಿಸಲಾದ Fire Extinguisherಗಳಿಗೆ ನೀರು ಪೂರೈಕೆ ಮಾಡಲು ಪ್ರತ್ಯೇಕ water tank ಅಳವಡಿಸುವ ಬಗ್ಗೆ – ಟೆಂಡರು ಅನುಮೋದನೆ ಬಗ್ಗೆ.

**ನಿರ್ಣಯ:** ದಿನಾಂಕ 03.02.2020ರ ಕಟ್ಟಡ ಸಮಿತಿಯ ಶಿಫಾರಸ್ಸಿನಂತೆ ಮಂಗಳೂರು ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ಎಂ.ಬಿ.ಎ ಕಟ್ಟಡದಲ್ಲಿ ಅಳವಡಿಸಲಾದ Fire Extinguisherಗಳಿಗೆ ನೀರು ಪೂರೈಕೆ ಮಾಡಲು ಪ್ರತ್ಯೇಕ water tank ಅಳವಡಿಸುವ ಕಾಮಗಾರಿಗೆ ಗುತ್ತಿಗೆದಾರರ ಸಂಧಾನಿತ ಟೆಂಡರು ಮೊತ್ತ ರೂ.3,91,725.00ನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಮಂವಿ/ಇಡಿ: ಸಾ.ಸ.1:41(2020)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ಆಡಳಿತ ಸೌಧ ಕಟ್ಟಡದ ಸೆನೆಟ್ ಹಾಲ್ ಮುಂದೆ ವಿದ್ಯಾರ್ಥಿಗಳ ವ್ಯಾಸಂಗ ಪ್ರವೇಶ ಅರ್ಜಿ ಪಡೆಯುವ ಕೊಠಡಿಯನ್ನು ನಿರ್ಮಿಸುವ ಕಾಮಗಾರಿ – ಟೆಂಡರು ಅನುಮೋದನೆ ಬಗ್ಗೆ.

**ನಿರ್ಣಯ:** ದಿನಾಂಕ 03.02.2020ರ ಕಟ್ಟಡ ಸಮಿತಿಯ ಶಿಫಾರಸ್ಸಿನಂತೆ ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತ ಸೌಧ ಕಟ್ಟಡದ ಸೆನೆಟ್ ಹಾಲ್ ಮುಂದೆ ವಿದ್ಯಾರ್ಥಿಗಳ ವ್ಯಾಸಂಗ ಪ್ರವೇಶ ಅರ್ಜಿ ಪಡೆಯುವ ಕೊಠಡಿಯನ್ನು ನಿರ್ಮಿಸುವ ಕಾಮಗಾರಿಗೆ ಗುತ್ತಿಗೆದಾರರ ಸಂಧಾನಿತ ಟೆಂಡರು ಮೊತ್ತ ರೂ.3,61,613.00ನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಮವಿ/ಇಡಿ/ಸಾ.ಸ.1:42(2020)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಆವರಣದಲ್ಲಿರುವ MBA ವಿಭಾಗದ ಸೆಮಿನಾರ್ ಹಾಲ್ ಮತ್ತು ಅದಕ್ಕೆ ತೆರಳುವ passage ಗೆ Vitrified tiles ಅಳವಡಿಸುವುದು ಮತ್ತು ಗೋಡೆಗೆ ಬಣ್ಣ ಬಳಿಯುವ ಕಾಮಗಾರಿ – ಟೆಂಡರು ಅನುಮೋದನೆ ಬಗ್ಗೆ.

**ನಿರ್ಣಯ:** ದಿನಾಂಕ 03.02.2020ರ ಕಟ್ಟಡ ಸಮಿತಿಯ ಶಿಫಾರಸ್ಸಿನಂತೆ ಮಂಗಳೂರು ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ವ್ಯವಹಾರ ಆಡಳಿತ ವಿಭಾಗದ ಸೆಮಿನಾರ್ ಹಾಲ್ ಮತ್ತು ಅದಕ್ಕೆ ತೆರಳುವ passageಗೆ Vitrified tiles ಅಳವಡಿಸುವ ಮತ್ತು ಗೋಡೆಗೆ ಬಣ್ಣ ಬಳಿಯುವ ಕಾಮಗಾರಿಗೆ ಗುತ್ತಿಗೆದಾರರ ಸಂಧಾನಿತ ಟೆಂಡರು ಮೊತ್ತ ರೂ.4,85,221.00ನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಮವಿ/ಇಡಿ/ಸಾ.ಸ.1:43(2020)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯ ಆವರಣದಲ್ಲಿರುವ IQAC Office ಕೊಠಡಿ ಪಕ್ಕದಲ್ಲಿರುವ ತರಗತಿ ಕೊಠಡಿಯನ್ನು Sports science ಪ್ರಯೋಗಾಲಯ ಕೊಠಡಿಯನ್ನಾಗಿ ನವೀಕರಿಸುವ ಕಾಮಗಾರಿ

**ನಿರ್ಣಯ:** ದಿನಾಂಕ 03.02.2020ರ ಕಟ್ಟಡ ಸಮಿತಿಯ ಶಿಫಾರಸ್ಸಿನಂತೆ ಮಂಗಳೂರು ವಿಶ್ವವಿದ್ಯಾನಿಲಯದ IQAC ಕಚೇರಿ ಪಕ್ಕದಲ್ಲಿರುವ ತರಗತಿ ಕೊಠಡಿಯನ್ನು Sports Science ಪ್ರಯೋಗಾಲಯ ಕೊಠಡಿಯನ್ನಾಗಿ ನವೀಕರಿಸುವ ಕಾಮಗಾರಿಗೆ ಗುತ್ತಿಗೆದಾರರ ಸಂಧಾನಿತ ಟೆಂಡರು ಮೊತ್ತ ರೂ.2,20,285.00ನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಮಂವಿ/ಇಡಿ: ಸಾ.ಸ.1:44(2020)

**ವಿಷಯ:** Construction of loft to the main building in commerce Dept office at FMKMC college Madikeri, kodagu dist., – ಟೆಂಡರು ಅನುಮೋದನೆ ಬಗ್ಗೆ.

**ನಿರ್ಣಯ:** ದಿನಾಂಕ 03.02.2020ರ ಕಟ್ಟಡ ಸಮಿತಿಯ ಶಿಫಾರಸ್ಸಿನಂತೆ ಫೀಲ್ಡ್ ಮಾರ್ಷಲ್ ಕೆ. ಎಂ. ಕಾರ್ಯಪ್ಪ ಕಾಲೇಜು, ಮಡಿಕೇರಿ ಇಲ್ಲಿನ ವಾಣಿಜ್ಯ ವಿಭಾಗದ ಕಟ್ಟಡದ ಮೇಲಂತಸ್ತು ಕಾಮಗಾರಿಗೆ ಗುತ್ತಿಗೆದಾರರ ಸಂಧಾನಿತ ಟೆಂಡರು ಮೊತ್ತ ರೂ.2,22,098.00ನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಮಂವಿ/ಇಡಿ: ಸಾ.ಸ.1:45(2020)

**ವಿಷಯ:** Proposed galvalume sheet roofing for path way in between science block and commerce block and library extension work at Mangalore University P.G. Center, Chikka Aluvara, Kodagu Dist.

**ನಿರ್ಣಯ:** ದಿನಾಂಕ 03.02.2020ರ ಕಟ್ಟಡ ಸಮಿತಿಯ ಶಿಫಾರಸ್ಸಿನಂತೆ ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರ ಚಿಕ್ಕ ಅಳುವಾರದಲ್ಲಿ galvalume sheet roofing for path way in between science block and commerce block and library extension ಕಾಮಗಾರಿಗಳಿಗೆ ಗುತ್ತಿಗೆದಾರರ ಸಂಧಾನಿತ ಟೆಂಡರು ಮೊತ್ತ ರೂ.3,65,355.00ನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಮಂವಿ/ಇಡಿ: ಸಾ.ಸ.1:46(2020)

**ವಿಷಯ:** Proposed new toilet construction to the IQAC room, renovation work of four number of existing boys and girls toilets located at FMKMC College Campus Madikeri, Kodagu Dist. – ಟೆಂಡರು ಅನುಮೋದನೆ ಬಗ್ಗೆ.

**ನಿರ್ಣಯ:** ದಿನಾಂಕ 03.02.2020ರ ಕಟ್ಟಡ ಸಮಿತಿಯ ಶಿಫಾರಸ್ಸಿನಂತೆ ಫೀಲ್ಡ್ ಮಾರ್ಷಲ್ ಕೆ. ಎಂ. ಕಾರ್ಯಪ್ಪ ಕಾಲೇಜು, ಮಡಿಕೇರಿ ಇಲ್ಲಿನ IQAC ಕಚೇರಿ ಕೊಠಡಿಗೆ ಹೊಸ ಶೌಚಾಲಯದ ಕಾಮಗಾರಿ ಹಾಗೂ ಪ್ರಸ್ತುತ ಇರುವ ಪುರುಷರ ಹಾಗೂ ಮಹಿಳೆಯರ ನಾಲ್ಕು ಶೌಚಾಲಯಗಳ ನವೀಕರಣ ಕಾಮಗಾರಿಗಳಿಗೆ ಗುತ್ತಿಗೆದಾರರ ಸಂಧಾನಿತ ಟೆಂಡರು ಮೊತ್ತ ರೂ.4,34,317.00ನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಮಂವಿ/ಇಡಿ:ಸಾ.ಸ.1:47(2020)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯ ಆವರಣದ ಮಂಗಳಗಂಗೋತ್ರಿ S.B.I. ಶಾಖೆಗೆ ಮಹಿಳೆಯರ ಶೌಚಾಲಯ ನಿರ್ಮಾಣ ಮತ್ತು ಮೇಲ್ಛಾವಣಿಗೆ Galvalume sheet ಅಳವಡಿಸುವ ಕಾಮಗಾರಿ – ಟೆಂಡರು ಅನುಮೋದನೆ ಬಗ್ಗೆ.

**ನಿರ್ಣಯ:** ದಿನಾಂಕ 03.02.2020ರ ಕಟ್ಟಡ ಸಮಿತಿಯ ಶಿಫಾರಸ್ಸಿನಂತೆ ಮಂಗಳೂರು ವಿಶ್ವವಿದ್ಯಾನಿಲಯ ಆವರಣದ ಮಂಗಳಗಂಗೋತ್ರಿ S.B.I. ಶಾಖೆಗೆ ಮಹಿಳೆಯರ ಶೌಚಾಲಯ ನಿರ್ಮಾಣ ಮತ್ತು ಮೇಲ್ಛಾವಣಿಗೆ Galvalume sheet ಅಳವಡಿಸುವ ಕಾಮಗಾರಿಗಳಿಗೆ ಗುತ್ತಿಗೆದಾರರ ಸಂಧಾನಿತ ಟೆಂಡರು ಮೊತ್ತ ರೂ.3,39,709.00ನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಮಂವಿ/ಇಡಿ:ಸಾ.ಸ.1:48(2020)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯ ಆವರಣದಲ್ಲಿರುವ ವಿಜ್ಞಾನ ಸಂಕೀರ್ಣ ಕಟ್ಟಡದ ಹಿಂಭಾಗದಲ್ಲಿ ಇರುವ ವಾಹನ ತಂಗುದಾಣದಲ್ಲಿ ಖಾಲಿ ಕೆಮಿಕಲ್ ಬಾಟಲ್, ಸೆರಾಮಿಕ್ Waste ಗಳ ಶೇಖರಣೆಗಾಗಿ ಪ್ರತ್ಯೇಕ ಕೊಠಡಿ ಮತ್ತು ಸ್ವೀಪರ್‌ಗಳಿಗಾಗಿ ವಿಶ್ರಾಂತಿ ಕೊಠಡಿ ನಿರ್ಮಿಸುವುದು – ಟೆಂಡರು ಅನುಮೋದನೆ ಬಗ್ಗೆ.

**ನಿರ್ಣಯ:** ದಿನಾಂಕ 03.02.2020ರ ಕಟ್ಟಡ ಸಮಿತಿಯ ಶಿಫಾರಸ್ಸಿನಂತೆ ಮಂಗಳೂರು ವಿಶ್ವವಿದ್ಯಾನಿಲಯ ಆವರಣದಲ್ಲಿರುವ ವಿಜ್ಞಾನ ಸಂಕೀರ್ಣ ಕಟ್ಟಡದ ಹಿಂಭಾಗದಲ್ಲಿ ಇರುವ ವಾಹನ ತಂಗುದಾಣದಲ್ಲಿ ಖಾಲಿ ಕೆಮಿಕಲ್ ಬಾಟಲ್, ಸೆರಾಮಿಕ್ Wasteಗಳ ಶೇಖರಣೆಗಾಗಿ ಪ್ರತ್ಯೇಕ ಕೊಠಡಿ ಮತ್ತು ಸ್ವೀಪರ್‌ಗಳಿಗಾಗಿ ವಿಶ್ರಾಂತಿ ಕೊಠಡಿ ನಿರ್ಮಾಣ ಕಾಮಗಾರಿಗಳಿಗೆ ಟೆಂಡರ್ ಮೊತ್ತ ರೂ.4,95,319.00ನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಮವಿ/ಇಡಿ:ಸಾ.ಸ.1:49(2020)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯ ಆವರಣದಲ್ಲಿರುವ ಪುರುಷರ ವಸತಿನಿಲಯ (ಸುವರ್ಣ ಬ್ಲಾಕ್ ಭೋಜನಾಲಯ ಮತ್ತು ಓಲ್ಡ್ ಬ್ಲಾಕ್) ಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸಿರುವ ಮುಖ್ಯ ಯು.ಜಿ. ಕೇಬಲ್‌ನ್ನು ಬದಲಾಯಿಸಿ ಅಳವಡಿಸುವ ಬಗ್ಗೆ.

**ನಿರ್ಣಯ:** ದಿನಾಂಕ 03.02.2020ರ ಕಟ್ಟಡ ಸಮಿತಿಯ ಶಿಫಾರಸ್ಸಿನಂತೆ ಮಂಗಳೂರು ವಿಶ್ವವಿದ್ಯಾನಿಲಯ ಆವರಣದಲ್ಲಿರುವ ಪುರುಷರ ವಸತಿನಿಲಯ (ಸುವರ್ಣ ಬ್ಲಾಕ್ ಭೋಜನಾಲಯ ಮತ್ತು ಓಲ್ಡ್ ಬ್ಲಾಕ್) ಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸಿರುವ ಮುಖ್ಯ ಯು.ಜಿ. ಕೇಬಲ್‌ನ್ನು ಬದಲಾಯಿಸಿ ಅಳವಡಿಸುವ ಕಾಮಗಾರಿಗೆ ಗುತ್ತಿಗೆದಾರರ ಸಂಧಾನಿತ ಟೆಂಡರು ಮೊತ್ತ ರೂ.3,06,235.00ನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಮವಿ/ಇಡಿ: ಸಾ.ಸ.1:50(2020)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯ ಆವರಣದಲ್ಲಿರುವ IQAC Office ಕೊಠಡಿ ಪಕ್ಕದಲ್ಲಿರುವ ತರಗತಿ ಕೊಠಡಿಯನ್ನು NMR Equipment ಅಳವಡಿಸಿ ಪ್ರಯೋಗಾಲಯ ಕೊಠಡಿಯನ್ನಾಗಿ ನವೀಕರಿಸುವ ಕಾಮಗಾರಿ.

**ನಿರ್ಣಯ:** ದಿನಾಂಕ 03.02.2020ರ ಕಟ್ಟಡ ಸಮಿತಿಯ ಶಿಫಾರಸ್ಸಿನಂತೆ ಮಂಗಳೂರು ವಿಶ್ವವಿದ್ಯಾನಿಲಯ ಆವರಣದಲ್ಲಿರುವ IQAC ಕಚೇರಿ ಕೊಠಡಿ ಪಕ್ಕದಲ್ಲಿರುವ ತರಗತಿ ಕೊಠಡಿಯನ್ನು NMR Equipment ಅಳವಡಿಸಿ ಪ್ರಯೋಗಾಲಯ ಕೊಠಡಿಯನ್ನಾಗಿ ನವೀಕರಿಸುವ ಕಾಮಗಾರಿಗೆ ಗುತ್ತಿಗೆದಾರರ ಸಂಧಾನಿತ ಟೆಂಡರು ಮೊತ್ತ ರೂ.3,34,943.00ನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಆಡಳಿತ:ಸಾ.ಸ.1:51(2020)

**ವಿಷಯ:** ಕುಲಸಚಿವರ ಕಛೇರಿಯಲ್ಲಿರುವ ಡುಪ್ಲೋ ಯಂತ್ರಕ್ಕೆ ಅಗತ್ಯವಿರುವ Master Roll & Ink ಖರೀದಿ ಕುರಿತು.

**ನಿರ್ಣಯ:** M/s Unique Systems, Mangalore ಇವರಿಂದ Master Roll ಒಂದಕ್ಕೆ ರೂ.1,860/–+335/–(GST) ಹಾಗೂ Ink ಒಂದಕ್ಕೆ ರೂ.875/–+105/–(GST) ರಂತೆ ಟೆಂಡರ್ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೆ ಖರೀದಿಸುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ:ಸಾ.ಸ.1:52(2020)

**ವಿಷಯ:** ಅಂತರ್ ವಿಶ್ವವಿದ್ಯಾನಿಲಯ ವರ್ಗಾವಣೆ – ಪ್ರೊ.ಜಿ.ಕೆ. ನಾಗರಾಜ್ ಇವರ ಮನವಿಗೆ ಸಂಬಂಧಿಸಿ ನಿರಾಕ್ಷೇಪಣಾ ಪತ್ರ ನೀಡುವ ಬಗ್ಗೆ.

**ನಿರ್ಣಯ:** ಪ್ರೊ. ಜಿ. ಕೆ. ನಾಗರಾಜ್ ಇವರನ್ನು ಹುದ್ದೆ ರಹಿತವಾಗಿ ದಾವಣಗೆರೆ ವಿಶ್ವವಿದ್ಯಾನಿಲಯ ಇಲ್ಲಿಗೆ ಅಂತರ್ ವಿಶ್ವವಿದ್ಯಾನಿಲಯ ವರ್ಗಾವಣೆ ನಿಯಮದಡಿ ವರ್ಗಾಯಿಸಲು ಶಿಫಾರಸ್ಸು ಮಾಡುವ (ನಿರಾಕ್ಷೇಪಣಾ ಪತ್ರ ನೀಡುವ) ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ:ಸಾ.ಸ.1:53(2020)

**ವಿಷಯ:** ಮುಖ್ಯ ಛಾಯಾಗ್ರಾಹಕ ಹುದ್ದೆಯ ಸೃಜನೆಗೆ ಸಂಬಂಧಿಸಿದ ಪರಿನಿಯಮದ ಅನುಮೋದನೆ ಬಗ್ಗೆ.

**ನಿರ್ಣಯ:** ಛಾಯಾಗ್ರಾಹಕ ಹುದ್ದೆಯಲ್ಲಿ 10 ವರ್ಷಗಳ ಅಧಿಕ ಕಾಲ ಸೇವೆ ಸಲ್ಲಿಸಿದ ಸಿಬ್ಬಂದಿಗಳಿಗೆ ಮುಖ್ಯ ಛಾಯಾಗ್ರಾಹಕ ಹುದ್ದೆಗೆ ಪದೋನ್ನತಿ ನೀಡಲು ಸಾಧ್ಯವಾಗುವಂತೆ ಹಾಗೂ ಅರ್ಹ ಸಿಬ್ಬಂದಿಗಳು ಲಭ್ಯವಿಲ್ಲದಿದ್ದಲ್ಲಿ ಸದರಿ ಹುದ್ದೆಯನ್ನು ನೇರ ನೇಮಕಾತಿ ಮೂಲಕ ಭರ್ತಿಗೊಳ್ಳಲು ಸಾಧ್ಯವಾಗುವಂತೆ ವಿಶ್ವವಿದ್ಯಾನಿಲಯದ ಅನುಶಾಸನ ಸಮಿತಿ ಸಭೆಯಲ್ಲಿ ತಯಾರಿಸಲಾದ ಮುಖ್ಯ ಛಾಯಾಗ್ರಾಹಕ ಹುದ್ದೆಯ ಸೃಜನೆಗೆ ಸಂಬಂಧಿಸಿದ ಕರಡು ಪರಿನಿಯಮವನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ:ಸಾ.ಸ.1:54(2020)

**ವಿಷಯ:** ದಿನಾಂಕ 01.01.2006 ರಿಂದ ಜಾರಿಗೊಂಡ ಪರಿಷ್ಕೃತ ಯುಜಿಸಿ ವೇತನ ಶ್ರೇಣಿಗೆ ಸಂಬಂಧಿಸಿದ ಅನುಶಾಸನದ ಕೆರಿಯರ್ ಎಡ್ವಾನ್ಸ್‌ಮೆಂಟ್ ಸ್ಕೀಂ ಪ್ರಕಾರ ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ಉಪನಿರ್ದೇಶಕರಿಗೆ ಪದೋನ್ನತಿ – ಆಯ್ಕೆ ಸಮಿತಿಯ ಶಿಫಾರಸ್ಸನ್ನು ಅನುಮೋದಿಸುವ ಬಗ್ಗೆ.

**ನಿರ್ಣಯ:** ಆಯ್ಕೆ ಸಮಿತಿಯ ಶಿಫಾರಸ್ಸಿನಂತೆ ದಿನಾಂಕ 01.01.2006 ರಿಂದ ಜಾರಿಗೊಂಡ ಪರಿಷ್ಕೃತ ಯುಜಿಸಿ ವೇತನ ಶ್ರೇಣಿಗೆ ಸಂಬಂಧಿಸಿದ ಅನುಶಾಸನದ ಕೆರಿಯರ್ ಎಡ್ವಾನ್ಸ್‌ಮೆಂಟ್ ಸ್ಕೀಂ ಪ್ರಕಾರ ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ಉಪನಿರ್ದೇಶಕರಿಗೆ ದಿನಾಂಕ 15.10.2015 ರಿಂದ ಅನ್ವಯವಾಗುವಂತೆ ಪದೋನ್ನತಿ ನೀಡುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ:ಸಾ.ಸ.1:55(2020)

**ವಿಷಯ:** ಶ್ರೀ ಧರ್ಮಸ್ಥಳ ಮುಂಜುನಾಥೇಶ್ವರ ಕಾಲೇಜು (ಸ್ವಾಯತ್ತತೆ) ಉಜಿರೆ ಸಂಸ್ಥೆಯನ್ನು ಮಂಗಳೂರು ವಿಶ್ವವಿದ್ಯಾನಿಲಯದ ಪಿ.ಎಚ್‌ಡಿ ವ್ಯಾಸಂಗಕ್ಕೆ ಸಂಶೋಧನಾ ಕೇಂದ್ರವನ್ನಾಗಿ ಮಾನ್ಯತೆ ಮಾಡುವ ಬಗ್ಗೆ.

**ನಿರ್ಣಯ:** ಶ್ರೀ ಧರ್ಮಸ್ಥಳ ಮುಂಜುನಾಥೇಶ್ವರ ಕಾಲೇಜು (ಸ್ವಾಯತ್ತತೆ), ಉಜಿರೆ ಸಂಸ್ಥೆಯನ್ನು ಸಂಶೋಧನಾ ಕೇಂದ್ರವನ್ನಾಗಿ ಮಾನ್ಯತೆ ಮಾಡಲು ಪರಿಶೀಲನಾ ಸಮಿತಿ ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ:ಸಾ.ಸ.1:56(2020)

**ವಿಷಯ:** ಕಾಲೇಜುಗಳಿಗೆ/ವಿದ್ಯಾಸಂಸ್ಥೆಗಳಿಗೆ ಸಂಯೋಜನೆ ನೀಡುವ ಅನುಶಾಸನದ ಬಗ್ಗೆ.

**ನಿರ್ಣಯ:** ಕಾಲೇಜುಗಳಿಗೆ/ವಿದ್ಯಾಸಂಸ್ಥೆಗಳಿಗೆ ಸಂಯೋಜನೆ ನೀಡುವ ಅನುಶಾಸನವನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಪರೀಕ್ಷಾಂಗ:ಸಾ.ಸ.1:57(2020)

**ವಿಷಯ:** 2020ನೇ ವರ್ಷದಲ್ಲಿ ಪದವಿ ಹಾಗೂ ಸ್ನಾತಕೋತ್ತರ ಪದವಿಯ ಪರೀಕ್ಷೆಗಳನ್ನು ನಡೆಸಲು ರಚನೆಯಾದ ಪರೀಕ್ಷಕರ ಮಂಡಳಿಯ ಅನುಮೋದನೆ ಕುರಿತು.

**ನಿರ್ಣಯ:** ಪರೀಕ್ಷಕರ ನೇಮಕಾತಿ ಮಂಡಳಿಯ ಶಿಫಾರಸ್ಸಿನಂತೆ 2020ನೇ ವರ್ಷದಲ್ಲಿ ಪದವಿ ಹಾಗೂ ಸ್ನಾತಕೋತ್ತರ ಪದವಿಯ ಪರೀಕ್ಷೆಗಳನ್ನು ನಡೆಸಲು ಜೇಷ್ಠತೆಯ ಆಧಾರದಂತೆ ರಚನೆಯಾದ ವಿವಿಧ ಕೋರ್ಸಿನ ಪರೀಕ್ಷಕರ ಮಂಡಳಿ ಹಾಗೂ ಪರೀಕ್ಷಕರ ಪಟ್ಟಿಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟ್:ಸಾ.ಸ.1:58(2020)

**ವಿಷಯ:** ಪದವಿ ಮತ್ತು ಸ್ನಾತಕೋತ್ತರ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ಸಂಯುಕ್ತ ಅಧ್ಯಯನ ಮಂಡಳಿಯ ಪುನರ್ರಚನೆಯ ಬಗ್ಗೆ.

**ನಿರ್ಣಯ:** ಪದವಿ ಮತ್ತು ಸ್ನಾತಕೋತ್ತರ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ಸಂಯುಕ್ತ ಅಧ್ಯಯನ ಮಂಡಳಿಯನ್ನು ಪುನರ್ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟ್:ಸಾ.ಸ.1:59(2020)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ಅಧ್ಯಯನ ವಿಭಾಗಕ್ಕೆ ಪ್ರಭಾರ ಅಧ್ಯಕ್ಷರ ನೇಮಕಾತಿ ಬಗ್ಗೆ.

**ನಿರ್ಣಯ:** ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ಅಧ್ಯಯನ ವಿಭಾಗಕ್ಕೆ ಪ್ರಭಾರ ಅಧ್ಯಕ್ಷರನ್ನು ನೇಮಕಾತಿ ಮಾಡುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಆಡಳಿತ:ಸಾ.ಸ.1:60(2020)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಗಣಕ ವಿಜ್ಞಾನ ವಿಭಾಗಕ್ಕೆ ಅಗತ್ಯವಿರುವ ಪೀಠೋಪಕರಣ ಖರೀದಿ ಕುರಿತು.

**ನಿರ್ಣಯ:** ಮಂಗಳೂರು ವಿಶ್ವವಿದ್ಯಾನಿಲಯದ ಗಣಕ ವಿಜ್ಞಾನ ವಿಭಾಗಕ್ಕೆ M/s Godrej and Boyce Mfg. Co., Ltd., Bangalore ಇವರ ಅಧಿಕೃತ ಸರಬರಾಜುದಾರರಾದ M/s Neeal Sales & Service, Mangalore ಇವರಿಂದ ದಿನಾಂಕ 27.03.2019ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಅನುಮೋದನೆಗೊಂಡ ಧಾರಣಾ ಗುತ್ತಿಗೆ ದರದಲ್ಲಿ ಅಗತ್ಯವಿರುವ ರೂ.2,61,416.25 ಮೊತ್ತದ ಪೀಠೋಪಕರಣಗಳನ್ನು ಖರೀದಿಸುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ :ಸಾ.ಸ.1:61(2020)

**ವಿಷಯ:** ಮಾನವಪ್ರಜ್ಞೆ ಮತ್ತು ಯೋಗ ವಿಜ್ಞಾನ ವಿಭಾಗ ಮಂಗಳೂರು ವಿಶ್ವವಿದ್ಯಾನಿಲಯ – ಧಾರಣಾಗುತ್ತಿಗೆ ದರದಲ್ಲಿ 7.5 KVA Online UPS ಮತ್ತು ಬ್ಯಾಟರಿಗಳ ಖರೀದಿಗೆ ಮಂಜೂರಾತಿ ನೀಡುವ ಬಗ್ಗೆ.

**ನಿರ್ಣಯ:** ಮಂಗಳೂರು ವಿಶ್ವವಿದ್ಯಾನಿಲಯದ ಮಾನವಪ್ರಜ್ಞೆ ಮತ್ತು ಯೋಗ ವಿಜ್ಞಾನ ವಿಭಾಗಕ್ಕೆ 7.5 KVA Online UPS ಮತ್ತು ಬ್ಯಾಟರಿಗಳನ್ನು ದಿನಾಂಕ 02.01.2020ರಲ್ಲಿ ಅನುಮೋದನೆಗೊಂಡ ಧಾರಣಾಗುತ್ತಿಗೆ ದರದಲ್ಲಿ M/s Techser Power Solutions Pvt. Ltds., Mangalore ಇವರಿಂದ ರೂ.2,23,497.00(ತೆರಿಗೆ ಸೇರಿ) ಮೊತ್ತದಲ್ಲಿ ಖರೀದಿಸುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ :ಸಾ.ಸ.1:62(2020)

**ವಿಷಯ:** ಬಿ.ಎಡ್. ಪದವಿಯಲ್ಲಿ ಅತೀ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿ/ವಿದ್ಯಾರ್ಥಿನಿಗೆ ಪ್ರದಾನ ಮಾಡಲು ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಸ್ಥಾಪಿಸಲಾದ ಡಾ.ಟಿ.ಎಂ.ಎ. ಪೈ ಚಿನ್ನದ ಪದಕ ದತ್ತಿನಿಧಿಯ ಠೇವಣಿ ಮರು ಪಾವತಿಸುವ ಬಗ್ಗೆ.

**ನಿರ್ಣಯ:** ಬಿ.ಎಡ್. ಪದವಿಯಲ್ಲಿ ಅತೀ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿ/ವಿದ್ಯಾರ್ಥಿನಿಗೆ ಪ್ರದಾನ ಮಾಡಲು ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಸ್ಥಾಪಿಸಲಾದ ಡಾ.ಟಿ.ಎಂ.ಎ. ಪೈ ಚಿನ್ನದ ಪದಕ ದತ್ತಿನಿಧಿಯ ಮೂಲನಿಧಿ ಮೊತ್ತ ರೂ.50,000/–ವನ್ನು ಮರುಪಾವತಿಸುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ :ಸಾ.ಸ.1:63(2020)

**ವಿಷಯ:** ಮಂಗಳಗಂಗೋತ್ರಿ ಕೊಣಾಜೆಯಲ್ಲಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದಿಂದ ಸ್ಥಾಪಿಸಲಾಗಿರುವ 110 ಕೆ. ವಿ. ವಿದ್ಯುತ್ ಉಪಕೇಂದ್ರಕ್ಕೆ ಹೆಚ್ಚುವರಿ ಜಮೀನು ನೀಡುವ ಬಗ್ಗೆ.

**ನಿರ್ಣಯ:** ಮಂಗಳಗಂಗೋತ್ರಿ ಕೊಣಾಜೆಯಲ್ಲಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದಿಂದ ಸ್ಥಾಪಿಸಲಾಗಿರುವ 110 ಕೆ. ವಿ. ವಿದ್ಯುತ್ ಉಪಕೇಂದ್ರಕ್ಕೆ ಹೆಚ್ಚುವರಿ ಜಮೀನು ನೀಡುವ ಪ್ರಸ್ತಾವನೆಗೆ ಸರ್ಕಾರ ಅನುಮತಿ ನೀಡಿದರೆ, ಪರವಾನಿಗೆ ಶುಲ್ಕ ಕಟ್ಟುವ ಷರತ್ತಿನ ಮೇರೆಗೆ Indemnity Bond ನೊಂದಿಗೆ ಪರವಾನಿಗೆ ಶುಲ್ಕ ನಿಗದಿಪಡಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ:ಸಾ.ಸ.1:64(2020)

**ವಿಷಯ:** ದಿನಾಂಕ 01.01.1996ರ ಯುಜಿಸಿ ಪರಿಷ್ಕೃತ ವೇತನ ಶ್ರೇಣಿಯ ಸರ್ಕಾರಿ ಆದೇಶ/ಪರಿನಿಯಮದಲ್ಲಿ ತಿಳಿಸಿದಂತೆ ಕೆರಿಯರ್ ಅಡ್ವಾನ್ಸ್‌ಮೆಂಟ್ ಸ್ಕೀಂನ್ನು ದಿನಾಂಕ 15.11.1999ರಿಂದ ಅನ್ವಯಗೊಳಿಸದೆ ಅರ್ಹತಾ ದಿನಾಂಕದಿಂದ ಅನ್ವಯಗೊಳಿಸಿ 2006ರ ಯುಜಿಸಿ ವೇತನ ಶ್ರೇಣಿಯಲ್ಲಿ ಅರ್ಹತಾ ದಿನಾಂಕದಿಂದ ಕಾಲ್ಪನಿಕವಾಗಿ ವೇತನ ನಿಗದಿಪಡಿಸಿರುವುದಕ್ಕೆ ಆಗಿರುವ 2010–11ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯಲ್ಲಿನ ಕಂಡಿಕೆ (18)ರಲ್ಲಿನ ಆಕ್ಷೇಪಣೆಗೆ ಸರ್ಕಾರದಿಂದ ಪಡೆದ ಸ್ಪಷ್ಟೀಕರಣದಂತೆ ವಿಶ್ವವಿದ್ಯಾನಿಲಯ ಹಂತದಲ್ಲಿಯೇ ಕ್ರಮಕೈಗೊಳ್ಳುವ ಬಗ್ಗೆ.

**ನಿರ್ಣಯ:** ಸರ್ಕಾರವು ವಿಶ್ವವಿದ್ಯಾನಿಲಯ ಹಂತದಲ್ಲಿಯೇ ಕ್ರಮ ವಹಿಸುವಂತೆ ತಿಳಿಸಿರುವುದರಿಂದ ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ 1996ರ ಪರಿಷ್ಕೃತ ಯುಜಿಸಿ ವೇತನ ಕೆರಿಯರ್ ಅಡ್ವಾನ್ಸ್‌ಮೆಂಟ್ ಸ್ಕೀಂನಡಿಯಲ್ಲಿ ದಿನಾಂಕ 01.01.1996 ರಿಂದ 15.11.1999ರ ಅವಧಿಯಲ್ಲಿ ಪದೋನ್ನತಿಗೆ ಅರ್ಹತೆಯನ್ನು ಪಡೆದಿರುವ ಶಿಕ್ಷಕರಿಗೆ ವೃತ್ತಿ ಪದೋನ್ನತಿಯನ್ನು ಅರ್ಹತಾ ದಿನಾಂಕದಿಂದ ಅನ್ವಯವಾಗುವಂತೆ ಮಂಜೂರು ಮಾಡಿ ಕಾಲ್ಪನಿಕ ವೇತನ ನಿಗದಿಗೊಳಿಸಿ, ಹಣಕಾಸು ಸೌಲಭ್ಯವನ್ನು ದಿನಾಂಕ 15.11.1999ರಿಂದ ನೀಡಿರುವ ಪ್ರಸ್ತಾವನೆಯನ್ನು ಘಟನೋತ್ತರವಾಗಿ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ:ಸಾ.ಸ.1:65(2020)

**ವಿಷಯ:** ಸಹಾಯಕ ಕಾರ್ಯಕಾರಿ ಅಭಿಯಂತರರ (A.E.E) ಮತ್ತು ಸಹಾಯಕ ಅಭಿಯಂತರ (A.E) ಹುದ್ದೆಗಳ ವೃಂದ ಮತ್ತು ನೇಮಕಾತಿ ನಿಯಮಗಳನ್ನು ನಿಯಂತ್ರಿಸುವ ಪರಿನಿಯಮದ ಅನುಮೋದನೆ ಬಗ್ಗೆ.

**ನಿರ್ಣಯ:** ಮಂಗಳೂರು ವಿಶ್ವವಿದ್ಯಾನಿಲಯದ ಸಹಾಯಕ ಕಾರ್ಯಕಾರಿ ಅಭಿಯಂತರರ (A.E.E) ಮತ್ತು ಸಹಾಯಕ ಅಭಿಯಂತರ (A.E) ಹುದ್ದೆಗಳ ವೃಂದ ಮತ್ತು ನೇಮಕಾತಿ ನಿಯಮಗಳನ್ನು ನಿಯಂತ್ರಿಸುವ ಪರಿನಿಯಮವನ್ನು ಪರಿಷ್ಕರಿಸುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಪರೀಕ್ಷಾಂಗ:ಸಾ.ಸ.1:66(2020)

**ವಿಷಯ:** ಶ್ರೀ. ಚ. ನ. ಶಂಕರ್ ರಾವ್ ಇವರಿಗೆ ಡಿ.ಲಿಟ್. ಪದವಿ ಪ್ರದಾನ ಮಾಡುವ ಬಗ್ಗೆ.

**ನಿರ್ಣಯ:** ಶ್ರೀ ಚ. ನ. ಶಂಕರ್ ರಾವ್ ಇವರಿಗೆ ಸಮಾಜಶಾಸ್ತ್ರದಲ್ಲಿ ಡಿ. ಲಿಟ್. ಪದವಿ ಪ್ರದಾನ ಮಾಡುವ ಬಗೆಗಿನ ಮೌಲ್ಯಮಾಪನ ಹಾಗೂ ಮೌಖಿಕ ವರದಿಗಳನ್ನು ಅನುಮೋದಿಸಿ ಡಿ. ಲಿಟ್. ಪದವಿ ಪ್ರದಾನ ಮಾಡಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟ್:ಸಾ.ಸ.1:67(2020)

**ವಿಷಯ:** ವಿಶ್ವವಿದ್ಯಾನಿಲಯದ ವಿವಿಧ ಪ್ರಾಧಿಕಾರಗಳ ಸಭೆಗಳಿಗೆ ಒದಗಿಸಲಾಗುವ ಊಟೋಪಹಾರದ ದರಗಳ ಪರಿಷ್ಕರಣೆ ಬಗ್ಗೆ.

**ನಿರ್ಣಯ:** ವಿಶ್ವವಿದ್ಯಾನಿಲಯದ ಸಿಂಡಿಕೇಟು, ಶೈಕ್ಷಣಿಕ ಮಂಡಳಿ, ಹಣಕಾಸು ಸಮಿತಿ ಮತ್ತು ವಿವಿಧ ಪ್ರಾಧಿಕಾರಗಳ ಸಮಿತಿ ಸಭೆಗಳಿಗೆ ಒದಗಿಸುವ ಊಟೋಪಹಾರದ ನಿಗದಿತ ದರಗಳನ್ನು ಪರಿಷ್ಕರಿಸುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ:ಸಾ.ಸ.1:68(2020)

**ವಿಷಯ:** ಘಟಿಕೋತ್ಸವದಲ್ಲಿ ಧರಿಸುವ ಉಡುಪುಗಳ ವಿನ್ಯಾಸ ಬದಲಾವಣೆ ಅನುಮೋದನೆ ಬಗ್ಗೆ.

**ನಿರ್ಣಯ:** ದಿನಾಂಕ 09.01.2020ರಂದು ನಡೆದ ಡೀನರ ಸಮಿತಿಯ ಶಿಫಾರಸ್ಸಿನಂತೆ ಹಾಗೂ ದಿನಾಂಕ 03.02.2020ರಂದು ನಡೆದ ಶೈಕ್ಷಣಿಕ ಮಂಡಳಿಯಲ್ಲಿ ಅನುಮೋದನೆಗೊಂಡಂತೆ ಘಟಿಕೋತ್ಸವದಲ್ಲಿ ಧರಿಸುವ ಉಡುಪುಗಳ ವಿನ್ಯಾಸ ಬದಲಾವಣೆಯ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಾರ್ವತ್ರಿಕ:ಸಾ.ಸ.1:69(2020)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ 2018–19ನೇ ಸಾಲಿನ ವಾರ್ಷಿಕ ವರದಿಯ ಅನುಮೋದನೆ ಬಗ್ಗೆ.

**ನಿರ್ಣಯ:** ದಿನಾಂಕ 03.02.2020ರಂದು ನಡೆದ ಶೈಕ್ಷಣಿಕ ಮಂಡಳಿಯಲ್ಲಿ ಅನುಮೋದನೆಗೊಂಡ 2018–19ನೇ ಸಾಲಿನ ವಾರ್ಷಿಕ ವರದಿಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟ್:ಸಾ.ಸ.1:70(2020)

**ವಿಷಯ:** ಡಾ. ಪಾರ್ವತಿ ಅಪ್ಪಯ್ಯ, ಸಿಂಡಿಕೇಟ್ ಸದಸ್ಯರು ಸಲ್ಲಿಸಿರುವ ಪ್ರಸ್ತಾವನೆಗಳು

**ನಿರ್ಣಯ:** ಡಾ. ಪಾರ್ವತಿ ಅಪ್ಪಯ್ಯ, ಸಿಂಡಿಕೇಟ್ ಸದಸ್ಯರು ಇವರು ಮಡಿಕೇರಿಯ ಫೀಲ್ಡ್ ಮಾರ್ಷಲ್ ಕೆ. ಎಂ. ಕಾರ್ಯಪ್ಪ ಕಾಲೇಜಿನ ಅಭಿವೃದ್ಧಿಗೆ ಸಂಬಂಧಪಟ್ಟಂತೆ ವಿಷಯವನ್ನು ಮಂಡಿಸಿ, ಕಳೆದ 5 ವರ್ಷಗಳಿಂದ ಕಾಲೇಜಿನಲ್ಲಿ ಹೆಚ್ಚಿನ ಅಭಿವೃದ್ಧಿ ಕಾಮಗಾರಿಗಳು ನಡೆದಿರುವುದಿಲ್ಲ. ಮುಂದಿನ ದಿನಗಳಲ್ಲಿ ಆದ್ಯತೆ ಮೇರೆಗೆ ಕಾಲೇಜಿನಲ್ಲಿ ಹೊಸ ಕಟ್ಟಡಗಳು ಮತ್ತು ಇತರ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಬೇಕು ಅಲ್ಲದೆ ಹೆಚ್ಚಿನ ಶಿಕ್ಷಕರು ಮಂಗಳೂರಿಗೆ ವರ್ಗಾವಣೆಯಾಗಿರುವುದರಿಂದ ಅಲ್ಲಿಯ ಬೋಧನಾ ಕಾರ್ಯಕ್ಕೆ ತೊಡಕಾಗಿರುತ್ತದೆ. ಆದುದರಿಂದ ಇನ್ನು ಮುಂದೆ ವರ್ಗಾವಣೆ ಮಾಡುವುದಾದಲ್ಲಿ ಸೂಕ್ತ ವ್ಯವಸ್ಥೆ ಮಾಡಬೇಕೆಂದು ಪ್ರಸ್ತಾಪಿಸಿದರು.

ಮಾನ್ಯ ಕುಲಪತಿಗಳು ಫೀಲ್ಡ್ ಮಾರ್ಷಲ್ ಕೆ. ಎಂ. ಕಾರ್ಯಪ್ಪ ಕಾಲೇಜಿನ ಅಭಿವೃದ್ಧಿ ಕಾರ್ಯ ಕೈಗೆತ್ತಿಕೊಳ್ಳಲಾಗುವುದು ಹಾಗೂ ಮುಂದಿನ ಶಿಕ್ಷಕರ ನೇಮಕಾತಿಯಲ್ಲಿ ಕಾಲೇಜಿಗೆ ಆದ್ಯತೆ ನೀಡಲಾಗುವುದೆಂದು ಸಭೆಗೆ ತಿಳಿಸಿದರು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟ್:ಸಾ.ಸ.1:71(2020)

**ವಿಷಯ:** ಪ್ರೊ. ಎಂ.ಎಸ್. ತಳವಾರ, ಸಿಂಡಿಕೇಟ್ ಸದಸ್ಯರು ಸಲ್ಲಿಸಿರುವ ಪ್ರಸ್ತಾವನೆಗಳು.

**ನಿರ್ಣಯ:** ಪ್ರೊ. ಎಂ. ಎಸ್. ತಳವಾರ, ಸಿಂಡಿಕೇಟ್ ಸದಸ್ಯರು ಇವರ ಪ್ರಸ್ತಾವನೆಗಳು:

1. Recruitment of teaching faculty for the Department of Education as per the NCTE requirement.

   ಈ ಪ್ರಸ್ತಾವನೆ ಬಗ್ಗೆ ಮಾತನಾಡುತ್ತಾ 2006ರಲ್ಲಿ ಅನುಮೋದನೆಗೊಂಡ ಅನುಶಾಸನದಲ್ಲಿ ಶಿಕ್ಷಕ ವೃಂದದ ಹುದ್ದೆಗಳು ಇರಲಿಲ್ಲ. ಆದುದರಿಂದ NCTE ನಿಯಮಾವಳಿಯಂತೆ ಅನುಶಾಸನ ರಚಿಸಿ ಸರ್ಕಾರದ ಅನುಮೋದನೆಗೆ ಕಳುಹಿಸಲಾಗಿದೆ ಎಂದು ಸಭೆಗೆ ತಿಳಿಯಪಡಿಸಲಾಯಿತು.

2. Consideration of taking over the Govt. College of Education CTE as constituent college so as to enrich the cafulty of Education to undertake several schemes and programmes:

   ಸದರಿಯವರ ಈ ಪ್ರಸ್ತಾವನೆಯನ್ನು ಒಪ್ಪಿ ಮಾನ್ಯ ಕುಲಪತಿಗಳು ಈ ಬಗ್ಗೆ ಸರ್ಕಾರಕ್ಕೆ ಪತ್ರ ಬರೆಯಲಾಗುವುದು ಎಂದು ಸಭೆಗೆ ತಿಳಿಸಿದರು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ :ಸಾ.ಸ.1:72(2020)

**ವಿಷಯ:** ಜೀವ ವಿಜ್ಞಾನ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ – ಧಾರಣಾಗುತ್ತಿಗೆ ದರದಲ್ಲಿ 10 KVA Online UPS ಮತ್ತು ಬ್ಯಾಟರಿಗಳ ಖರೀದಿಗೆ ಮಂಜೂರಾತಿ ನೀಡುವ ಬಗ್ಗೆ.

**ನಿರ್ಣಯ:** ಮಂಗಳೂರು ವಿಶ್ವವಿದ್ಯಾನಿಲಯದ ಜೀವ ವಿಜ್ಞಾನ ವಿಭಾಗಕ್ಕೆ 10 KVA Online UPS ಮತ್ತು ಬ್ಯಾಟರಿಗಳನ್ನು ಅಧಿಕೃತ ಜ್ಞಾಪನ ಸಂಖ್ಯೆ:ಮಂವಿವಿ/ಅಭಿವೃದ್ಧಿ/49/2017–18/ಡಿ4, 02.01.2020ರಲ್ಲಿ ಅನುಮೋದನೆಗೊಂಡ ಧಾರಣಾಗುತ್ತಿಗೆ ದರದಲ್ಲಿ M/s Techser Power Solutions Pvt. Ltd., Mangalore ಇವರಿಂದ ಹಳೆಯ ಯುಪಿಎಸ್ ಮತ್ತು ಬ್ಯಾಟರಿಗಳ ವಿನಿಮಯದೊಂದಿಗೆ ಖರೀದಿಸುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ :ಸಾ.ಸ.1:73(2020)

**ವಿಷಯ:** ಸ್ಟೂಡೆಂಟ್ ಫೀಡ್‌ಬ್ಯಾಕ್ ಪಡೆದಿರುವ ಬಗ್ಗೆ.

**ನಿರ್ಣಯ:** ಮಾನ್ಯ ಕುಲಪತಿಯವರು ಸ್ಟೂಡೆಂಟ್ ಫೀಡ್‌ಬ್ಯಾಕ್ ಚೆನ್ನಾಗಿರದ ಅಧ್ಯಾಪಕರನ್ನು ಕರೆದು ತಮ್ಮ ಬೋಧನಾ ಗುಣಮಟ್ಟವನ್ನು ಉತ್ತಮಗೊಳಿಸಲು ತಿಳಿಸಿರುತ್ತಾರೆ ಹಾಗೂ ಕೆಲವು ಅಧ್ಯಾಪಕರುಗಳು ಉತ್ತಮವಾಗಿ ಕಾರ್ಯ ನಿರ್ವಹಿಸಿದ್ದು, ಅವರನ್ನು ಕರೆದು ಅಭಿನಂದನೆ ಸಲ್ಲಿಸಿ ಶ್ಲಾಘಿಸಿರುತ್ತಾರೆ. ಈ ಪ್ರಸ್ತಾವನೆಯನ್ನು ಒಮ್ಮತದಿಂದ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಪರೀಕ್ಷಾಂಗ:ಸಾ.ಸ.1:74(2020)

**ವಿಷಯ:** ಡಿ. ಲಿಟ್. ಪದವಿ ಪ್ರದಾನ – ಪರೀಕ್ಷಕರ ಆಯ್ಕೆ ಬಗ್ಗೆ.

**ನಿರ್ಣಯ:** ಪ್ರೊ. ಪಿ. ಶ್ರೀಪತಿ ಲಕ್ಷ್ಮಿನಾರಾಯಣ ತಂತ್ರಿ, ನಿವೃತ್ತ ಪ್ರಾಂಶುಪಾಲರು, ಮಹಾಕಾಳಿ ಮಾರ್ಗ, ಅಂಬಲಪಾಡಿ, ಉಡುಪಿ ಇವರು ಡಿ. ಲಿಟ್. ಪದವಿಗಾಗಿ **ಭಾರತೀಯ ದರ್ಶನಗಳ ಇತಿಹಾಸ ಒಂದು ಮಾನವಶಾಸ್ತ್ರೀಯ ವಿಮರ್ಶೆ** ಎಂಬ ಶೀರ್ಷಿಕೆಯಡಿಯಲ್ಲಿ ತಯಾರಿಸಿದ ಸಾರಲೇಖ ಹಾಗೂ ಪ್ರಬಂಧದ ಮೌಲ್ಯಮಾಪನಕ್ಕಾಗಿ ಮಾನ್ಯ ಕುಲಪತಿಯವರು ರಚಿಸಿರುವ ಸಮಿತಿಯು ಸಲ್ಲಿಸಿರುವ ಪರೀಕ್ಷಕರ ಪಟ್ಟಿಯನ್ನು ಘಟನೋತ್ತರವಾಗಿ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಪರೀಕ್ಷಾಂಗ:ಸಾ.ಸ.1:75(2020)

**ವಿಷಯ:** ಪ್ರೊ.ಪಿ. ಶ್ರೀಪತಿ ಲಕ್ಷ್ಮಿನಾರಾಯಣ ತಂತ್ರಿ ಇವರಿಗೆ ಡಿ. ಲಿಟ್. ಪದವಿ ಪ್ರದಾನ ಮಾಡುವ ಬಗ್ಗೆ.

**ನಿರ್ಣಯ:** ಪ್ರೊ. ಪಿ. ಶ್ರೀಪತಿ ಲಕ್ಷ್ಮಿನಾರಾಯಣ ತಂತ್ರಿ ಇವರಿಗೆ ಸಮಾಜಶಾಸ್ತ್ರದಲ್ಲಿ ಡಿ. ಲಿಟ್. ಪದವಿ ಪ್ರದಾನ ಮಾಡುವ ಬಗೆಗಿನ ಮೌಲ್ಯಮಾಪನ ಹಾಗೂ ಮೌಖಿಕ ವರದಿಗಳನ್ನು ಅನುಮೋದಿಸಿ ಡಿ. ಲಿಟ್. ಪದವಿ ಪ್ರದಾನ ಮಾಡಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ:ಸಾ.ಸ.1:76(2020)

**ವಿಷಯ:** ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಕಾಲೇಜಿನ ವಾಣಿಜ್ಯ ವಿಭಾಗಕ್ಕೆ ಸಹಾಯಕ ಪ್ರಾಧ್ಯಾಪಕರಾಗಿ ನೇಮಕಗೊಂಡಿರುವ ಶ್ರೀ ಪ್ರದೀಪ ಭಂಡಾರಿ ಇವರ ನೇಮಕಾತಿ ಬಗ್ಗೆ ಶ್ರೀ ಅಜಯ ಇವರು ದಾಖಲಿಸಿದ್ದ ರಿಟ್‌ಪಿಟಿಷನ್‌ಗೆ ಸಂಬಂಧಿಸಿದ ನ್ಯಾಯಾಲಯದ ಆದೇಶವನ್ನು ಜಾರಿಗೊಳಿಸಿದ ಬಗ್ಗೆ.

**ನಿರ್ಣಯ:** ನ್ಯಾಯಾಲಯದ ಆದೇಶದ ಪ್ರಕಾರ ಕ್ರಮ ತೆಗೆದುಕೊಂಡು ಶ್ರೀ ಅಜಯ ಇವರಿಗೆ ಆದೇಶ ಹೊರಡಿಸಲಾಗಿದ್ದು, ಸದರಿಯವರು ಈವರೆಗೆ ಕರ್ತವ್ಯಕ್ಕೆ ಹಾಜರಾಗದಿರುವ ಕಾರಣ ಶ್ರೀ ಪ್ರದೀಪ ಭಂಡಾರಿ ಇವರನ್ನು ಬಿಡುಗಡೆಗೊಳಿಸದೆ ಯಥಾಸ್ಥಿತಿ ಕಾಪಾಡಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ: ಸಾ.ಸ.1:77(2020)

**ವಿಷಯ:** Approval for Intellectual Property Rights Policy – reg.

**ನಿರ್ಣಯ:** ಮಂಗಳೂರು ವಿಶ್ವವಿದ್ಯಾನಿಲಯದ ಕರಡು Intellectual Property Rights Policy (IPR)ನ್ನು ಅನುಮೋದಿಸಲಾಯಿತು.

ಮಾನ್ಯ ಕುಲಪತಿಯವರು ಸದಸ್ಯರ ಸಲಹೆ ಸಹಕಾರಗಳಿಗೆ ಧನ್ಯವಾದಗಳನ್ನರ್ಪಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

| | |
|---|---|
| ಸಹಿ/– | ಸಹಿ/– |
| ಕುಲಸಚಿವರು | ಕುಲಪತಿಗಳು |